ಸಂಪುಟ 01 | ಸಂಚಿಕೆ 159 ಗುರುವಾರ 13 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ಅಂತರರಾಷ್ಟ್ರೀಯ ಎಡಗೈ ಬಳಕೆದಾರರ ದಿನ (International Left-Handers Day)

ಎಡಗೈಯಿಂದ ಬರೆಯುವ ಮತ್ತು ಕೆಲಸ ಮಾಡುವವರ ವಿಶೇಷತೆ ಹಾಗೂ ಅವರು ಎದುರಿಸುವ ಸವಾಲುಗಳ ಬಗ್ಗೆ ಜಾಗೃತಿ ಮೂಡಿಸುವ ದಿನ.

2) ವಿಶ್ವ ಅಂಗಾಂಗ ದಾನ ದಿನ (World Organ Donation Day)

ಅಂಗಾಂಗ ದಾನದ ಮಹತ್ವದ ಕುರಿತು ಜನರಲ್ಲಿ ಅರಿವು ಮೂಡಿಸುವ ದಿನ. ಅಂಗಾಂಗ ದಾನದಿಂದ ಅಗತ್ಯವಿರುವವರಿಗೆ ಹೊಸ ಜೀವನದ ಅವಕಾಶ ದೊರೆಯಬಹುದು.

## ಸುಭಾಷಿತ

ಒಂದೇ ಒಂದು ಒಳ್ಳೆಯದಿದೆ, ಅದು ಜ್ಞಾನ. ಒಂದೇ ಒಂದು ಕೆಡುಕಿದೆ, ಅದೇ ಅಜ್ಞಾನ.

–ಸಾಕ್ರಟಿಸ್

## ಸರ್ಕಾರ ಸಮರ್ಥನೆಗೆ ಸಚಿವರು, ಶಾಸಕರ ಜೊತೆ ಸಿಎಂ ಚರ್ಚೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಖಾತೆ ಹಂಚಿಕೆಗೆ ಕೊನೆಗೂ ಹೈಕಮಾಂಡ್ ಗ್ರೀನ್ ಸಿಗ್ನಲ್ ನೀಡಿದ್ದು, ಅಧಿಕೃತ ಪಟ್ಟಿಯನ್ನು ಇಂದು ಮುಖ್ಯಮಂತ್ರಿಯವರು ಲೋಕಭವನಕ್ಕೆ ರವಾನಿಸಲಿದ್ದಾರೆ. ಕಳೆದ 10 ದಿನಗಳಿಂದಲೂ ಮರೀಚಿಕೆಯಾಗಿದ್ದ ಖಾತೆಗಳ ಹಂಚಿಕೆ ವಿಚಾರ ಕೊನೆಗೂ ಇತ್ಯರ್ಥಗೊಂಡಂತಾಗಿದೆ.ನಾಳೆಯಿಂದ ಅಧಿವೇಶನ ಆರಂಭಗೊಳ್ಳಲಿದ್ದು, ಮುನ್ನಾದಿನ ಖಾತೆಗಳನ್ನು ಹಂಚುತ್ತಿರುವುದು ರಾಜ್ಯ ರಾಜಕೀಯದಲ್ಲಿ ಇದೇ ಮೊದಲು ಎಂಬ ಟೀಕೆಗಳು ಕೇಳಿ ಬರುತ್ತಿವೆ.**



ಮಧ್ಯಾಹ್ನದ ವೇಳೆಗೆ ಪಟ್ಟಿಯನ್ನು ಲೋಕಭವನಕ್ಕೆ ರವಾನಿಸಲಾಗುತ್ತಿದ್ದು, ಅಧಿಕೃತ ಅಧಿಸೂಚನೆ ಪ್ರಕಟವಾದ ಬಳಿಕ ಸಂಜೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂಪುಟದ ಸಚಿವರು ಹಾಗೂ ಶಾಸಕರ ಜೊತೆ ಚರ್ಚೆಗೆ ಸಮಯ ನಿಗದಿಪಡಿಸಿದ್ದಾರೆ.ವಿಧಾನ ಮಂಡಲದ ಅಧಿವೇಶನದಲ್ಲಿ ವಿರೋಧ ಪಕ್ಷಗಳನ್ನು ಎದುರಿಸಲು ರಣತಂತ್ರ ರೂಪಿಸಲು ಇಂದು ಶಾಸಕರು ಮತ್ತು ಸಚಿವರ ಜೊತೆ ಚರ್ಚೆ ನಡೆಸಲಿದ್ದಾರೆ.

ವಿರೋಧ ಪಕ್ಷಗಳು ಬಿಡದಿ ಉಪ ನಗರ ನಿರ್ಮಾಣ, ನೈಸ್ ರಸ್ತೆ ವಿವಾದ, ಭ್ರಷ್ಟಾಚಾರಕ್ಕೆ ಗುರಿಯಾಗಿರುವ ಬಿ.ನಾಗೇಂದ್ರ ಅವರಿಗೆ ಸಚಿವ ಸ್ಥಾನ ನೀಡಿರುವುದು, ತಮಿಳುನಾಡಿಗೆ ಕಾವೇರಿ ನೀರು ಬಿಡುತ್ತಿರುವುದು, ಬೆಳೆ ನಷ್ಟ, ರೈತರ ಆತಹತ್ಯೆ, ಸಂಪುಟದಲ್ಲಿ ಮಹಿಳಾ ಪ್ರಾತಿನಿಧ್ಯ ಕೊರತೆ, ಪಿಂಚಣಿ ಫಲಾನುಭವಿಗಳ ಕಡಿತ, ಗ್ಯಾರಂಟಿ ಯೋಜನೆಗಳ ಪರಿಷ್ಕರಣೆ ಸೇರಿದಂತೆ ಹಲವಾರು ಸಮಸ್ಯೆಗಳನ್ನು ಆಯುಧವಾಗಿಟ್ಟುಕೊಂಡು ಸರ್ಕಾರದ ವಿರುದ್ಧ ಝುಳಪಿಸಲು ಸಜ್ಜಾಗಿವೆ.

ಇದಕ್ಕೆ ಪ್ರತಿಯಾಗಿ ಮುಖ್ಯಮಂತ್ರಿಯವರು ಅಧಿವೇಶನದಲ್ಲಿ ಸರ್ಕಾರವನ್ನು ಸಮರ್ಥಿಸಿಕೊಳ್ಳಲು ಸಚಿವರ ಜೊತೆ, ಕೆಲ ಶಾಸಕರ ನ್ನೊಳಗೊಂಡು ತಂಡಗಳನ್ನು ರಚಿಸಲಿದ್ದಾರೆ. ಸಂಪುಟ ವಿಸ್ತರಣೆ ಅಸಮಾಧಾನ, ಖಾತೆ ಹಂಚಿಕೆಯಲ್ಲಿನ ವಿಳಂಬ, ಕಾಂಗ್ರೆಸ್ ಹೈಕಮಾಂಡ್‌ನ ಅತಿಯಾದ ಹಸ್ತಕ್ಷೇಪದಿಂದ ಕಾಂಗ್ರೆಸ್‌ನಲ್ಲೇ ಅಸಮಾಧಾನ, ಅತೃಪ್ತಿಗಳು ತೀವ್ರವಾಗಿವೆ.

ಸಚಿವ ಸ್ಥಾನ ಸಿಗದೇ ಇರುವ ಕೆಲ ಶಾಸಕರು ಭಿನ್ನಮತೀಯರಾಗಿ ಸರ್ಕಾರದ ವಿರುದ್ಧ ಮುಗಿ ಬೀಳಲು ಒಳಗೊಳಗೆ ತಯಾರಾಗಿದ್ದಾರೆ. ಈ ಪರಿಸ್ಥಿತಿಗಳನ್ನು ಅರ್ಥೈಸಿಕೊಂಡಿರುವ ಮುಖ್ಯಮಂತ್ರಿಯವರು ಅಸಮಾಧಾನಿತರನ್ನು ಸಂತೈಸುವ ಜೊತೆಗೆ ಪಕ್ಷ ನಿಷ್ಠರಾಗಿ ಸರ್ಕಾರದ ಬೆಂಬಲಕ್ಕೆ ನಿಲ್ಲುವಂತಹ 30 ರಿಂದ 40 ಶಾಸಕರನ್ನು ಗುರುತಿಸಿದ್ದು, ಅವರುಗಳ ಜೊತೆ ವಿಷಯಾಧರಿತ ಚರ್ಚೆ ನಡೆಸಲಿದ್ದಾರೆ. ಪಕ್ಷ ರಾಜಕಾರಣ ವಿಚಾರ ಬಂದಾಗ ಸಾಮೂಹಿಕವಾಗಿ ಎಲ್ಲರೂ ವಿರೋಧ ಪಕ್ಷಗಳಿಗೆ ಎದುರು ನಿಲ್ಲಬೇಕು. ವಿಷಯಾಧರಿತ ಚರ್ಚೆಗಳು ಎದುರಾದಾಗ ಸಚಿವರ ಜೊತೆಗೆ ಶಾಸಕರು ಸರ್ಕಾರವನ್ನು ಸಮರ್ಥಿಸಿಕೊಳ್ಳಬೇಕೆಂದು ಮುಖ್ಯಮಂತ್ರಿ ಸಲಹೆ ನೀಡಲಿದ್ದಾರೆ.

ಇಂದಷ್ಟೇ ಖಾತೆ ಹಂಚಿಕೆಯಾಗುತ್ತಿರುವುದರಿಂದ 19 ಮಂದಿ ಹೊಸ ಸಚಿವರಿಗೆ ಇಲಾಖೆಯ ಕಾರ್ಯನಿರ್ವಹಣೆ ಮತ್ತು ಅಧಿವೇಶನದಲ್ಲಿ ಪ್ರಶ್ನೋತ್ತರ ಸೇರಿದಂತೆ ಕೆಲವು ಸಂದರ್ಭಗಳನ್ನು ನಿಭಾಯಿಸುವುದು ಕಷ್ಟಸಾಧ್ಯವಾಗುವ ಪರಿಸ್ಥಿತಿ ಇದೆ. ಅದಕ್ಕಾಗಿ ಕೆಲವು ಮಾಜಿ ಸಚಿವರು ಹಾಗೂ ಹಿರಿಯ ಶಾಸಕರನ್ನು ನೂತನ ಸಚಿವರ ಬೆಂಬಲಕ್ಕೆ ನಿಲ್ಲುವಂತೆ ಮುಖ್ಯಮಂತ್ರಿ ಮನವಿ ಮಾಡಿಕೊಳ್ಳಲಿದ್ದಾರೆ ಎನ್ನಲಾಗಿದೆ.

ಸಂಪುಟ ವಿಸ್ತರಣೆ ಸೇರಿದಂತೆ ಯಾವುದೇ ಅಸಮಾಧಾನಗಳನ್ನು ಚರ್ಚಿಸಲು ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಅವಕಾಶ ಕಲ್ಪಿಸಲಾಗುವುದು. ವಿಧಾನ ಮಂಡಲದ ವೇದಿಕೆಯಲ್ಲಿ ಸರ್ಕಾರದ ಸಮರ್ಥನೆ ಮಾಡಿಕೊಳ್ಳುವುದು ಮುಂದಿನ ಚುನಾವಣೆಯ ದೃಷ್ಟಿಯಿಂದ ಎಲ್ಲರಿಗೂ ಬಹುಮುಖ್ಯವಾಗಿದೆ.

ಶಾಸಕರು ಸರ್ಕಾರದ ಪರವಾಗಿ ನಿಲ್ಲಲೇಬೇಕು.ಪಕ್ಷ ಮುಂದಿನ ದಿನಗಳಲ್ಲಿ ಒಂದಲ್ಲಾ ಒಂದು ರೀತಿ ಅವಕಾಶಗಳನ್ನು ಕಲ್ಪಿಸಲಿದೆ. ಪಕ್ಷ ವಿರೋಧಿಗಳಾಗಿ, ಭಿನ್ನಮತೀಯರಂತೆ ವರ್ತಿಸುವವರ ವಿರುದ್ಧ ಕಠಿಣ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಎಚ್ಚರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

## ರಜಪೂತ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯಿಸುವಂತೆ ಶಾಸಕ ಜೆ.ಎನ್.ಗಣೇಶ್‌ಗೆ ಮನವಿ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ರಜಪೂತ ಅಭಿವೃದ್ಧಿ ನಿಗಮ ಸ್ಥಾಪಿಸಲು ಸರ್ಕಾರಕ್ಕೆ ಒತ್ತಾಯಿಸುವಂತೆ ಕಂಪ್ಲಿ ರಜಪೂತ ಸಮಾಜದವರು ಶಾಸಕ ಜೆ.ಎನ್.ಗಣೇಶ್‌ಗೆ ಮನವಿ ಸಲ್ಲಿಸಿದರು.**



ತಾಲೂಕು ಅಧ್ಯಕ್ಷ ಕೆ.ಇಂದ್ರಜಿತ್‌ಸಿಂಗ್ ಮಾತನಾಡಿ, ರಾಜ್ಯದ ರಜಪೂತ ಸಮುದಾಯ ದವರು ನಾನಾ ಕ್ಷೇತ್ರಗಳಲ್ಲಿ ಹಿಂದುಳಿದಿದ್ದಾರೆ. ರಜಪೂತರ ಅಭಿವೃದ್ಧಿಗಾಗಿ ನಿಗಮ ಸ್ಥಾಪಿಸುವಂತೆ ಅನೇಕ ವರ್ಷಗಳಿಂದ ಮನವಿ ಮಾಡುತ್ತಿದ್ದು, ಅಧಿವೇಶನದಲ್ಲಿ ಸಿಎಂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು, ಹಿಂದುಳಿದ ವರ್ಗಗಳ ಆಯೋಗದ ಮುಖ್ಯಸ್ಥರಿಗೆ ಒತ್ತಾಯಿಸಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಸಮಾಜದ ಲಕ್ಷ್ಮಣಸಿಂಗ್, ಜಮನ್‌ಸಿಂಗ್, ಗೋವರ್ಧನ್ ಸಿಂಗ್, ವಿನಯ್‌ಸಿಂಗ್, ಪೃಥ್ವಿರಾಜ ಸಿಂಗ್ ಇತರರಿದ್ದರು.

## ಭ್ರೂಣ ಲಿಂಗ ಪತ್ತೆ ನಿಷೇದ ಕಾಯ್ದೆ –1994–ಜಿಲ್ಲಾ ಸಲಹಾ ಸಮಿತಿ ಸಭೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ಯಾವುದೇ ಸ್ಕಾನಿಂಗ್ ಕೇಂದ್ರಗಳು ಹೆಣ್ಣುಭ್ರೂಣ ಪತ್ತೆಯನ್ನು ಮಾಡುವ ಕುರಿತು ಸಂಶಯ ಬಂದಲ್ಲಿ ತಕ್ಷಣವೇ ಕಾನೂನಾತ್ಮಕ ಕ್ರಮ ಜರುಗಿದಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು**



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದಲ್ಲಿ ಜರುಗಿದ ಭ್ರೂಣಲಿಂಗಪತ್ತೆ ಮತ್ತು ನಿಷೇಧ ಕಾಯ್ದೆ–1994 ರ ಜಿಲ್ಲಾ ಸಲಹಾ ಸಮಿತಿಯಲ್ಲಿ ಮಾತನಾಡುತ್ತಾ ಜಿಲ್ಲೆಯಲ್ಲಿ 148 ಸ್ಕ್ಯಾನಿಂಗ್ ಕೇಂದ್ರಗಳು ಇದ್ದು, ಮುಖ್ಯವಾಗಿ ಗರ್ಭಿಣಿಯರ ಅರೋಗ್ಯದ ಹಾಗೂ ನಿಯಮಾನುಸಾರ ಭ್ರೂಣದ ಆರೋಗ್ಯದ ನಿಗಾವಣೆಗಾಗಿ ನಿಗದಿತ ಅವಧಿಯಲ್ಲಿ ಸ್ಕ್ಯಾನ್ ಮಾಡಿಸಿದ ಹೊರತುಪಡಿಸಿ ಇತರೆ ಅವಧಿಯಲ್ಲಿ ಸ್ಕ್ಯಾನ್ ಮಾಡಿದ ಬಗ್ಗೆ ಮಾಹಿತಿ ಬಂದಲ್ಲಿ ಆಕಸ್ಮಿಕ ಬೇಟಿ ನೀಡಿ ಪರಿಶೀಲಿಸಲು ತಿಳಿಸಿದರು. ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಈಗಾಗಲೆ ಸಾರ್ವಜನಿಕರಿಗೆ ಕಾಯ್ದೆಯಡಿ ಭ್ರೂಣ ಲಿಂಗ ಪತ್ತೆ ಮಾಡಿಸುವ ಹಾಗೂ ಮಾಡುವವರಿಗೆ ಜೈಲು ಶಿಕ್ಷೆ ಹಾಗೂ ದಂಡ ಇರುವ ಬಗ್ಗೆ ಪ್ರಚಾರದ ಮಾಹಿತಿ ಫಲಕಗಳನ್ನು ಎಲ್ಲ ಕೇಂದ್ರಗಳಲ್ಲಿ ಪ್ರದರ್ಶಿಸಲು ತಿಳಿಸಿದರು.

ಈ ಸಂದರ್ಭದಲ್ಲಿ ಸಲಹಾ ಸಮಿತಿಯ ಅಧ್ಯಕ್ಷರಾದ ಹಿರಿಯ ಮಕ್ಕಳ ತಜ್ಞರಾದ ಡಾ ಶಿವಪ್ಪ ಮಾಲಿ ಪಾಟೀಲ್, ಸದಸ್ಯರಾದ ಪ್ರಸೂತಿ ತಜ್ಞೆ ಡಾ ರಾಜಕುಮಾರಿ ಕೆ ಎಸ್, ನ್ಯಾಯವಾದಿ ಡಾ ವಿಜಯಲಕ್ಷ್ಮಿ ಪಾಸೋಡೆ, ಎಫ್‌ಪಿಎಐ ನ ಜ್ಯೋತಿ, ಎಸ್‌ವಿವೈಎಮ್ ನ ಕೃಷ್ಣಾ, ಸದಸ್ಯ ಕಾರ್ಯದರ್ಶಿ ಹಾಗೂ ಕುಟುಂಬ ಕಲ್ಯಾಣ ಅನುಷ್ಠಾನ ಅಧಿಕಾರಿ ಡಾ ಶಿವಕುಮಾರ್ ನಾರಾ ಸೇರಿದಂತೆ ಜಿಲ್ಲಾ ಅರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ವಿಷಯ ನಿರ್ವಾಹಕರು ಅಮರೇಶ ಗಡ್ಡಿ, ಬಿಹೆಚ್‌ಇಓ ನಾಗರಾಜ್, ರಾಜಶೇಖರ್ ಉಪಸ್ಥಿತರಿದ್ದರು.

## ಜಾಲಹಳ್ಳಿ ಮೆಹಬೂಬ್ ಸುಭಾನಿ ದರ್ಗಾದಲ್ಲಿ ಫಾತಿಹಾ ಕಾರ್ಯಕ್ರಮ: ಸಿಹಿ ವಿತರಣೆ

ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಮೆಹಬೂಬ್ ಸುಭಾನಿ ದರ್ಗಾದಲ್ಲಿ ಆಖರಿ ಚಾರ್ಸುಂಬ ಅಂಗವಾಗಿ ಫಾತಿಹಾ ಕಾರ್ಯಕ್ರಮ ಭಕ್ತಿಭಾವದಿಂದ ನಡೆಯಿತು.**




ಮೆಹಬೂಬ್ ಸುಭಾನಿ ದರ್ಗಾದ ಮುತವಲ್ಲಿ ಅಬ್ಬಾಸಲಿ ಸಾಬ್ ಸರ್ನೌಬತ್ ಅವರ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂರಾರು ಭಕ್ತಾದಿಗಳು ಭಾಗವಹಿಸಿ ಫಾತಿಹಾ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಳೆಗಾಗಿ ಹಾಗೂ ಜಗತ್ತಿನಲ್ಲಿ ಶಾಂತಿ, ನೆಮ್ಮದಿ ನೆಲೆಸಲೆಂದು ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು. ಬಳಿಕ ಭಕ್ತಾದಿಗಳಿಗೆ ಸಿಹಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಊರಿನ ಪ್ರಮುಖರಾದ ಅಬ್ಬಾಸಲಿ ಸರ್ನೌಬತ್, ಯಾಸಿನ್ ಮುಲ್ಲಾ, ಇರ್ಫಾನ್ ಮುಲ್ಲಾ, ಮಹೆಬೂಬ್ ಪರಾಶಿ, ರಶೀದ್ ಅಗಬಾಯಿ, ಹಮೀದ್ ಸರ್ನೌಬತ್, ಗೂಡ್ ಸಾಬ್ ದಂಡೋತಿ, ಸಮೀರ್ ಅಗಬಾಯಿ, ಸಿಕಂದರ್, ಮುಸ್ತಫಾ ಯಾದಗೀರ್ ಸೇರಿದಂತೆ ಊರಿನ ಸಾರ್ವಜನಿಕರು ಹಾಗೂ ಭಕ್ತಾದಿಗಳು ಉಪಸ್ಥಿತರಿದ್ದರು.

## ಮಕ್ಕಳಲ್ಲಿ ರಕ್ತಹೀನತೆ ಕಾರಣವಾಗುವ ಜಂತುಹುಳು ನಿವಾರಣೆಗೆ ಅಲ್ಬಂಡೋಜೋಲ್ ಮಾತ್ರೆ ತಪ್ಪದೆ ಸೇವಿಸಿ:

ನೈಜ್ಯ ದೆಸೆ ನ್ಯೂಸ್

**ಮಾನವಿ: ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ ಅಂಗವಾಗಿ ಪೊತ್ನಾಳ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ "ಆರೋಗ್ಯವಂತ ಮಕ್ಕಳು– ಆರೋಗ್ಯವಂತ ಸಮಾಜ" ಎಂಬ ಸಂದೇಶದೊಂದಿಗೆ ಜಂತುಹುಳು ನಿವಾರಣಾ ಮಾತ್ರೆ ವಿತರಣೆ ಹಾಗೂ ಆರೋಗ್ಯ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**



ಕಾರ್ಯಕ್ರಮದಲ್ಲಿ ಜಂತುಹುಳು ಸೋಂಕಿನಿಂದ ಉಂಟಾಗುವ ಆರೋಗ್ಯ ಸಮಸ್ಯೆಗಳಾದ ಹೊಟ್ಟೆನೋವು, ಹಸಿವು ಕಡಿಮೆಯಾಗುವುದು, ರಕ್ತಹೀನತೆ, ಪೌಷ್ಟಿಕಾಂಶದ ಕೊರತೆ, ದೈಹಿಕ ಹಾಗೂ ಶೈಕ್ಷಣಿಕ ಬೆಳವಣಿಗೆಯ ಮೇಲೆ ಪರಿಣಾಮ ಉಂಟು ಮಾಡಬಹುದಾಗಿದ್ದು, ಇದರ ನಿವಾರಣೆಗಾಗಿ ನಿಯಮಿತವಾಗಿ ಜಂತುಹುಳು ನಿವಾರಣಾ ಮಾತ್ರೆ ಸೇವಿಸುವುದರ ಮಹತ್ವ ಕುರಿತು ಆರೋಗ್ಯ ಶಿಕ್ಷಣ ನೀಡಲಾಯಿತು.

ಅಲ್ಲದೆ ವೈಯಕ್ತಿಕ ಸ್ವಚ್ಛತೆ, ಕೈತೊಳೆಯುವ ಅಭ್ಯಾಸ, ಶುದ್ಧ ಕುಡಿಯುವ ನೀರಿನ ಬಳಕೆ, ಸ್ವಚ್ಛ ಆಹಾರ ಸೇವನೆಯಿಂದ ಮಕ್ಕಳ ಆರೋಗ್ಯ ಸುಧಾರಣೆ ಸಾಧ್ಯವೆಂದು ತಿಳಿಸಲಾಯಿತು.

ಈ ಸಂಧರ್ಭದಲ್ಲಿ ಜಿಲ್ಲಾ ಕಾರ್ಯಕ್ರಮ ಸಂಯೋಜಕರು? ಸಮುದಾಯ ಮೇಲ್ವಿಚಾರಣೆ ಹಾಗೂ ಸಿಪಿಓ ಬಸವರಾಜಪ್ಪಗೌಡ, ಜಿಲ್ಲಾ ಫ್ಲೋರೋಸಿಸ್ ಕನ್ಸಲ್ಟೆಂಟ್ ಗುರುಪ್ರಸಾದ್, ಮುಖ್ಯೋಪಾಧ್ಯಾಯರು ಆಯುಷಾ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶರಣಪ್ಪ ಗುಲಗುಂಚಿ, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಚೈತ್ರಾ, ಆರೋಗ್ಯ ನಿರೀಕ್ಷಣಾಧಿಕಾರಿ ವಿಶ್ವಾರಾಧ್ಯ, ಶಿಕ್ಷಕರಾದ ಲಕ್ಷ್ಮೀ, ದೀಪಾ, ಪ್ರಯೋಗ ಶಾಲಾ ತಂತ್ರಜ್ಞ ಗಂಗಾಧರ ಗುರಿಕಾರ, ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನೇತಾಜಿ ಶಿಕ್ಷಣ ಸಂಸ್ಥೆಯಿಂದ 80 ಮೀಟರ್ ಉದ್ದದ ಬೃಹತ್ ತ್ರಿವರ್ಣ ಧ್ವಜದ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ದೇಶಕ್ಕೆ ಸ್ವಾತಂತ್ರ್ಯ ದೊರೆತು 80 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ನೇತಾಜಿ ಶಿಕ್ಷಣ ಸಂಸ್ಥೆಯ ವತಿಯಿಂದ ಆಗಸ್ಟ್ 14ರಂದು 80 ಮೀಟರ್ ಉದ್ದದ ಬೃಹತ್ ತ್ರಿವರ್ಣ ಧ್ವಜದ ಮೆರವಣಿಗೆ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಕೆ. ವಿಜಯಲಕ್ಷ್ಮೀ ತಿಳಿಸಿದ್ದಾರೆ.**




ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಸ್ವಾತಂತ್ರ್ಯದ 80ನೇ ವರ್ಷದ ಸಂಭ್ರಮವನ್ನು ವಿಶೇಷವಾಗಿ ಆಚರಿಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಆಗಸ್ಟ್ 14ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಮಾನ್ವಿಯ ಬಸವ ವೃತ್ತದಲ್ಲಿ ಸನ್ಮಾನ್ಯ ಶಾಸಕರಿಂದ ತ್ರಿವರ್ಣ ಧ್ವಜದ ಮೆರವಣಿಗೆಗೆ ಚಾಲನೆ ದೊರೆಯಲಿದ್ದು, ಅಲ್ಲಿಂದ ತಹಶೀಲ್ದಾರ್ ಕಾರ್ಯಾಲಯದವರೆಗೆ ಮೆರವಣಿಗೆ ಸಾಗಲಿದೆ ಎಂದು ತಿಳಿಸಿದ್ದಾರೆ.

ಮೆರವಣಿಗೆಯಲ್ಲಿ ಶಾಸಕರು, ತಹಶೀಲ್ದಾರರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಸೇರಿದಂತೆ ನೇತಾಜಿ ಶಿಕ್ಷಣ ಸಂಸ್ಥೆಯ 1,360 ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಉಪನ್ಯಾಸಕರು ಭಾಗವಹಿಸಲಿದ್ದಾರೆ. ಸಾರ್ವಜನಿಕರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಕೆ. ವಿಜಯಲಕ್ಷ್ಮೀ ಮನವಿ ಮಾಡಿದ್ದಾರೆ.

ಈಗಾಗಲೇ ಕಳೆದ ಮೂರು ದಿನಗಳಿಂದ ನೇತಾಜಿ ಶಿಕ್ಷಣ ಸಂಸ್ಥೆಯ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ಇದರ ಜೊತೆಗೆ ದೇಶಭಕ್ತಿ ಗೀತೆಗೆ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳ ಸಾಮೂಹಿಕ ನೃತ್ಯ (ಫ್ಲಾಶ್ ಮಾಬ್), ತಿರಂಗಾ ರ್ಯಾಲಿ, ಧ್ವಜಾರೋಹಣ ಹಾಗೂ ಮಾರ್ಚ್‌ಫಾಸ್ಟ್ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ನೇತಾಜಿ ಶಿಕ್ಷಣ ಸಂಸ್ಥೆಯ ಎಲ್ಲಾ ವಿದ್ಯಾರ್ಥಿಗಳು ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿ ಭಾಗಿಯಾಗಿದ್ದು, ದೇಶಭಕ್ತಿ ಹಾಗೂ ರಾಷ್ಟ್ರಪ್ರೇಮದ ಸಂದೇಶವನ್ನು ಸಾರುವಂತೆ ವಿವಿಧ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ಕೆ. ವಿಜಯಲಕ್ಷ್ಮೀ ತಿಳಿಸಿದ್ದಾರೆ.

## ಶಕ್ತಿನಗರ ಪೊಲೀಸ್ ಠಾಣೆಯಲ್ಲಿ ಎಸ್‌ಸಿ/ಎಸ್‌ಟಿ ಸಭೆ

ನೈಜ್ಯ ದೆಸೆ ನ್ಯೂಸ್

**ಶಕ್ತಿನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ರವರ ನೇತೃತ್ವದಲ್ಲಿ ಎಸ್‌ಸಿ/ಎಸ್‌ಟಿ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದ ಮುಖಂಡರು, ಸಾರ್ವಜನಿಕರು ಹಾಗೂ ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದರು.**



ಈ ಸಂದರ್ಭದಲ್ಲಿ ಸಮುದಾಯದ ಜನರಿಂದ ವಿವಿಧ ಸಮಸ್ಯೆಗಳು ಹಾಗೂ ಅಹವಾಲುಗಳನ್ನು ಆಲಿಸಿ, ಅವುಗಳ ಕುರಿತು ಅಗತ್ಯ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ಸಾರ್ವಜನಿಕರು ತಮ್ಮ ಪ್ರದೇಶದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು, ಕಾನೂನು ಸುವ್ಯವಸ್ಥೆ, ಸುರಕ್ಷತೆ ಹಾಗೂ ಇತರ ವಿಷಯಗಳ ಕುರಿತು ಪೊಲೀಸ್ ಇಲಾಖೆಯ ಗಮನಕ್ಕೆ ತಂದರು.

ಅಹವಾಲುಗಳನ್ನು ಸ್ವೀಕರಿಸಿದ ಪಿ.ಎಸ್.ಐ ರವರು, ಪ್ರತಿಯೊಂದು ಸಮಸ್ಯೆಯನ್ನು ಕಾನೂನುಬದ್ಧವಾಗಿ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ಯಾವುದೇ ರೀತಿಯ ಕಿರುಕುಳ, ಅನ್ಯಾಯ ಅಥವಾ ಸಮಸ್ಯೆಗಳು ಎದುರಾದಲ್ಲಿ ಭಯಪಡದೆ ತಕ್ಷಣ ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ಸಾರ್ವಜನಿಕರಿಗೆ ಸಲಹೆ ನೀಡಲಾಯಿತು.

ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಸಾರ್ವಜನಿಕರ ಸಹಕಾರ ಅತ್ಯಂತ ಮುಖ್ಯವಾಗಿದ್ದು, ಪೊಲೀಸ್ ಇಲಾಖೆ ಹಾಗೂ ಸಾರ್ವಜನಿಕರ ನಡುವೆ ಉತ್ತಮ ಸಮನ್ವಯ ಇರಬೇಕು ಎಂದು ತಿಳಿಸಲಾಯಿತು. ಸಭೆಯ ಮೂಲಕ ಎಸ್‌ಸಿ/ಎಸ್‌ಟಿ ಸಮುದಾಯದ ಸಮಸ್ಯೆಗಳನ್ನು ನೇರವಾಗಿ ಆಲಿಸಿ, ಅವುಗಳಿಗೆ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಯಿತು.

## ಸಾಹಿತ್ಯ ಸಿಂಚನ

### ಸೂರ್ಯೋದಯದ ಕನಸು

ಮೌನದ ರಾತ್ರಿಯ ಕತ್ತಲೆಯ ನಡುವೆ,
ಒಂದು ಕನಸು ಮನದಲಿ ಮೂಡಿತು;
ಪೂರ್ವದ ಬಾನಿನ ಕೆಂಪು ಕಿರಣದಂತೆ,
ಹೊಸ ಬದುಕಿನ ಆಶೆಯಾಯಿತು.

ಸೋಲಿನ ನೆರಳು ಹಿಂದೆ ಸರಿದು,
ಗೆಲುವಿನ ಬೆಳಕು ಮುಂದೆ ಬರಲಿ;
ನಿನ್ನೆ ಕಳೆದು ಹೋದ ಕ್ಷಣಗಳೆಲ್ಲ,
ನಾಳೆಯ ಪಾಠವಾಗಿ ಉಳಿಯಲಿ.

ಸೂರ್ಯನ ಕಿರಣ ಭೂಮಿಗೆ ತಾಕಿದಂತೆ,
ನನ್ನ ಕನಸು ಮನವನ್ನು ತಾಕಲಿ;
ನಂಬಿಕೆಯ ಹಾದಿಯಲ್ಲಿ ನಡೆಯುವಾಗ,
ಪ್ರತಿಯೊಂದು ಹೆಜ್ಜೆಯೂ ಯಶಸ್ಸಾಗಲಿ.

ಕತ್ತಲಾದರೂ ಹೆದರದ ಮನಸ್ಸು,
ಬಿರುಗಾಳಿಗೂ ಬಾಗದ ಧೈರ್ಯವಾಗಲಿ;
ಕನಸುಗಳ ಗಗನದಲ್ಲಿ ಹಾರುವ ಹಕ್ಕಿಯಂತೆ,
ಸ್ವಾತಂತ್ರ್ಯದ ರೆಕ್ಕೆಗಳು ಚಾಚಲಿ.

ಹೊಸ ಬೆಳಗಿನ ಹೊಸ ನಿರೀಕ್ಷೆ,
ಜೀವನದ ದಾರಿಯಲಿ ಜೊತೆಯಾಗಲಿ;
ಸೂರ್ಯೋದಯದ ಸುಂದರ ಕನಸಿನಂತೆ,
ನನ್ನ ಭವಿಷ್ಯವೂ ಬೆಳಗಾಗಲಿ.

# ಕಲುಷಿತವಾದ ಐತಿಹಾಸಿಕ ದರೋಜಿ ಕೆರೆ ಸಂರಕ್ಷಿಸಿ, ಉಳಿಸುವಂತೆ ಆಗ್ರಹಚಿ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ /ಕಂಪ್ಲಿ: ಐತಿಹಾಸಿಕ ದರೋಜಿ ಕೆರೆ ಸಂರಕ್ಷಿಸಬೇಕೆಂದು ಆಗ್ರಹಿಸಿ, ದಲಿತ್ ಪ್ಯಾಂರ?ಸ್ ಆಫ್ ಇಂಡಿಯಾ ಬಳ್ಳಾರಿ ಜಿಲ್ಲಾ ಘಟಕ ಮತ್ತು ಸಮಾಜ ಸೇವಾ ಕಾರ್ಯಕರ್ತರ ವೇದಿಕೆ ಮುಖಾಂತರ ಸಮೀಪದ ಹೊಸ ದರೋಜಿ ಗ್ರಾಮದ ಗ್ರಾಮ ಪಂಚಾಯಿತಿಯಲ್ಲಿ ಸಂಸದ ಈ.ತುಕಾರಂ ಅವರಿಗೆ ಬರೆದಂತಹ ಮವಿ ಪತ್ರವನ್ನು ಕಾರ್ಯದರ್ಶಿ ಕೆ.ರುದ್ರಪ್ಪ ಇವರಿಗೆ ಸಲ್ಲಿಸಿದರು.**

ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿ.ನಾಗರಾಜ ಭೋವಿ ಮಾತನಾಡಿ, ಈ ಭಾಗದ ರೈತರ ಹಿತದೃಷ್ಟಿಯಿಂದ ಹಾಗೂ ಜನ ಜಾನುವಾರುಗಳಿಗೆ ನೀರುಣಿಸುವ ಹಿನ್ನಲೆ ಹಲವು ದಶಕಗಳ ಹಿಂದೆ ಟಿಪ್ಪು ಸುಲ್ತಾನ್ ಇವರು ದರೋಜಿ ಕೆರೆ ನಿರ್ಮಿಸಿದ್ದಾರೆ. ಈ ಕೆರೆಯು ಎರಡೂವರೆ ಮೈಲು ಉದ್ದವಿದ್ದು, 45 ಅಡಿ ಎತ್ತರವಿದು ವಿಹಂಗನ ನೋಟವನ್ನುಂಟು ಮಾಡಿದೆ. ಜಿಲ್ಲೆಯ ದೊಡ್ಡ ಕೆರೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕೆರೆ ಪ್ರದೇಶ ಸುಮಾರು ಉದ್ದ 3.600 ಕಿ.ಮೀ.ನಷ್ಟು ಉದ್ದವಿದೆ. ಕೆರೆಯು ಸುಮಾರು 4.47 ಮೀಟರ್ ಅಗಲ, ಕೆರೆ ಕೋಡಿ ಉದ್ದ ಸುಮಾರು 136.20 ಮೀಟರ್‌ನಷ್ಟಿದೆ.



ಗರಿಷ್ಠ 1511 ಅಡಿಯಷ್ಟು ನೀರಿನ ಮಟ್ಟ ಹೊಂದಿದೆ. ಇಲ್ಲಿನ 10 ಗ್ರಾಮಗಳ ಸುಮಾರು 3222 ಎಕರೆ ಪ್ರದೇಶಕ್ಕೆ ನೀರೊದಸಲಿದೆ. ಆದರೆ, ಈಗ ಜಿಂದಾಲ್ ಉಕ್ಕು ಕಾರ್ಖಾನೆ ಸೇರಿದಂತೆ ಇನ್ನಿತರ ಕಾರ್ಖಾನೆಗಳ ಕಲುಷಿತ ನೀರು, ಇಲ್ಲಿನ ಕೆರೆಗೆ ಸೇರ್ಪಡೆಯಿಂದಾಗಿ ಜಲ ಮಾಲಿನ್ಯವಾಗಿದೆ. ಮತ್ತು ಈ ಕುಲುಷಿತ ನೀರಿನಿಂದಾಗಿ ರೈತರಿಗೆ, ಕೃಷಿ ಕಾರ್ಮಿಕರಿಗೆ ಚರ್ಮದ ರೋಗದ ಜೊತೆಗೆ ಜಾನುವಾರು, ಪಕ್ಷಿಗೆ ಜೀವ ಕಂಟಕವಾಗಿದೆ. ಹಾಗೂ ಮೀನುಗಾರಿಕೆಗೆ ಮತ್ತು ಜೀವಿಸುವ ಮೀನುಗಳ ಬದುಕಿಗೆ ವಿಷ ಉಣಿಸುವಂತಾಗಿದೆ. ಮೀನುಗಳು ರೋಗಗ್ರಸ್ತವಾಗಿ ಸಾಯುತ್ತಿದ್ದು, ಮೀನುಗಾರಿಕೆ ಗುತ್ತಿಗೆದಾರರು, ಮೀನು ಬೇಟೆಗಾರರು ನಷ ಅನುಭವಿಸುತ್ತಿದ್ದಾರೆ.

ಇಲ್ಲಿನ ಕೆರೆಯಲ್ಲಿ ಕಲುಷಿತ ಸೇರುತ್ತಿದ್ದರೂ, ಸಂಬಂಧಿಸಿದ ಅಧಿಕಾರಿಗಳು ಮಾತ್ರ ಮೌನವಹಿಸಿರುವುದು ವಿಪರ್ಯಾಸವಾಗಿದೆ. ಇಲ್ಲಿನ ಕೆರೆ ಸಂರಕ್ಷಣೆಗೆ ಪ್ರತಿಯೊಬ್ಬರ ಹೊಣೆಯಾಗಿದೆ. ಆದ್ದರಿಂದ ಜನಪ್ರತಿನಿಧಿಗಳು, ಅಧಿಕಾರಿಗಳು ಕೂಡಲೇ ಗಮನಕ್ಕೆ ತೆಗೆದುಕೊಂಡು, ಇಲ್ಲಿನ ದರೋಜಿ ಕೆರೆ ಸಂರಕ್ಷಿಸುವ ಮೂಲಕ ಉಳಿಸಬೇಕು. ಇಲ್ಲವಾದಲ್ಲಿ ಕೆರೆ ಅಭಿವೃದ್ಧಿ ಪ್ರಾಧಿಕಾರ ಮತ್ತು ಕರ್ನಾಟಕ ಲೋಕಾಯುಕ್ತಗೆ ದೂರು ಸಲ್ಲಿಸಲಾಗುವುದು. ಮತ್ತು ಮುಂದಿನ ದಿನದಲ್ಲಿ ಉಗ್ರ ಹೋರಾಟ ಮಾಡಲಾಗುವುದು ಎಂದರು. ಸಮಾಜ ಸೇವಾ ಕಾರ್ಯಕರ್ತರ ವೇದಿಕೆಯ ರಾಜ್ಯ ಕಾರ್ಯಾಧ್ಯಕ್ಷ ಟಿ.ಎಚ್.ಎಂ.ರಾಜಕುಮಾರ ಮಾತನಾಡಿ, ಇಲ್ಲಿನ ಕೆರೆಯಿಂದಾಗಿ ಜನ, ಜಾನುವಾರು, ಪಕ್ಷಿ, ಪ್ರಾಣಿಗಳಿಗೆ ಅನುಕೂಲವಾಗಿದೆ. ಆದರೆ, ಕೆಲ ವರ್ಷಗಳಿಂದ ಕಾರ್ಖಾನೆಗಳಿಂದ ಬರುವ ಕಲುಷಿತ ನೀರು ಕೆರೆಗೆ ಸೇರುತ್ತಿದ್ದು, ನೀರು ಮಲೀನವಾಗಿ, ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಆದ್ದರಿಂದ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತು, ಕೆರೆ ಸಂರಕ್ಷಣೆಗೆ ಮುಂದಾಗಬೇಕು ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಎಂ. ಎಸ್.ಗುರುಮೂರ್ತಿ, ವಿ.ಮಾಯಣ್ಣ, ವಿ.ಗೋಪಾಲ. ವಿನೋದ, ಜಾಫರ್, ಸುರೇಶ, ಶಂಕ್ರಪ್ಪ, ಭೀಮಾ, ಹೊನ್ನೂರಸ್ವಾಮಿ ಇದ್ದರು.

# ಪದ್ಮಶ್ರೀ ಡಾ.ಎಸ್.ಆರ್.ರಂಗನಾಥ ಕೃವಿವಿ ರಾಯಚೂರಿನಲ್ಲಿ ರಾಷ್ಟ್ರೀಯ ಗ್ರಂಥಾಲಕರ ದಿನಾಚರಣ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ದಿನಾಂಕ 12.08.2026 ರಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಡಾ.ಬಿ.ಆರ್.ಅಂಬೇಡ್ಕರ ಕೇಂದ್ರ ಗ್ರಂಥಾಲಯದಲ್ಲಿ ಪದ್ಮಶ್ರೀ ಡಾ.ಎಸ್.ಆರ್.ರಂಗನಾಥ ಅವರ ಸ್ಮರಣಾರ್ಥವಾಗಿ ದೇಶಾದ್ಯಂತ ರಾಷ್ಟ್ರೀಯ ಗ್ರಂಥಾಪಾಲಕರ ದಿನವನ್ನು ಆಚರಿಸಲಾಯಿತು.**

ಡಾ.ಎಸ್.ಆರ್.ರಂಗನಾಥ ಅವರು ದಿನಾಂಕ 12.08.1892 ರಂದು ತಮಿಳುನಾಡಿನ ಶೀಯಾಲಿ ಎಂಬ ಗ್ರಾಮದಲ್ಲಿ ಜನಿಸಿದರು. ಭಾರತದ ಗ್ರಂಥಾಲಯ ಕ್ಷೇತ್ರಕ್ಕೆ ಹೊಸ ದಿಕ್ಕು ತೋರಿಸಿದ ಮಾಹನ್ ಚಿಂತಕ, ಗ್ರಂಥಾಲಯ ವಿಜ್ಞಾನ ಪಿತಾಮಹಾ ಇವರ ದಿನಚರಣೆಯನ್ನು ಕೃವಿವಿ ರಾಯಚೂರಿನಲ್ಲಿ ಆಚರಿಸಲಾಯಿತು. ಈ ಒಂದು ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಡಾ. ಜಾಗೃತಿ ಬಿ. ದೇಶಮಾನ್ಯ ಡೀನ್ (ವಿದ್ಯಾರ್ಥಿಗಳ ಕ್ಷೇಮಾಬೃದ್ಧಿ) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರ, ಹಾಗೂ ಡಾ. ರಾಜಣ್ಣ, ಆಡಳಿತಾಧಿಕಾರಿಗಳು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಹಾಗೂ ಡಾ. ಮಚೇಂದ್ರನಾಥ ಎಸ್., ಗ್ರಂಥಪಾಲಕರು ಕೃವಿವಿ ರಾಯಚೂರು ಉಪಸ್ಥಿತಿಯಲ್ಲಿದ್ದರು. ಪ್ರಾಸ್ತಾವಿಕ ನುಡಿಗಳು. ಡಾ. ಸತೀಶಕುಮಾರ ಎಸ್. ಗ್ರಂಥಾಲಯ ಸಹಾಯಕರು ಕೃವಿವಿ ರಾಯಚೂರು ಅವರು ಈ ಕಾರ್ಯಕ್ರಮದ ಉದ್ದೇಶ ಮತ್ತು ರೂಪರೇಶಗಳ ಬಗ್ಗೆ ಮಾತನಾಡುತ್ತಾ ಪದ್ಮಶ್ರೀ ಡಾ. ಎಸ್.ಆರ್.ರಂಗನಾಥ ಅವರ ಜೀವನ ಚರಿತ್ರೆ, ಮತ್ತು



ಗ್ರಂಥಾಲಯದ ಪಂಚ ಸೂತ್ರಗಳು 1. ಪುಸ್ತಕಗಳು ಬಳಕೆಗಾಗಿ 2. ಪ್ರತಿಯೊಬ್ಬ ಓದುಗನಿಗೆ ಅವನ/ಅವಳ ಆಯ್ಕೆ ಪುಸ್ತಕ 3. ಪ್ರತಿ ಪುಸ್ತಕಕ್ಕೂ ಅದರ ಸರಿಯಾದ ಓದುಗ 4. ಓದುಗರ ಸಮಯವನ್ನು ಉಳಿಸಿ 5. ಗ್ರಂಥಾಲಯವು ಬೆಳೆಯುತ್ತಿರುವ ಒಂದು ಸಂಸ್ಥೆ ಹಾಗೂ ಆದಿಕವಿ ಶ್ರೀ. ಮಹರ್ಷಿ ವಾಲ್ಮೀಕೀ ವಿಶ್ವವಿದ್ಯಾಲಯ, ರಾಯಚೂರಿನ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ನಾಲ್ಕೇನೆ ಸೇಮಿಷ್ಟರ್ ವಿದ್ಯಾರ್ಥಿಗಳಾದ ಶ್ರೀ ಕುಮಾರಿ. ಅಶ್ವನಿ, ಕುಮಾರಿ ಶೀಲ್ಪಾ, ಕುಮಾರಿ ಆರತಿ ಹಾಗೂ ಕುಮಾರಿ ಶೃತಿ ಮತು ಅಬ್ರಾರ್ ಮತ್ತು ಫಕಿರಪ್ಪ ಡಾ.ಬಿ.ಆರ್.ಅಂಬೇಡ್ಕರ ಕೇಂದ್ರ ಗ್ರಂಥಾಲಯದಲ್ಲಿ ತರಬೇತಿಗೆ ಬಂದಿರುವ ವಿದ್ಯಾರ್ಥಿಗಳಿಗೆ ಗ್ರಂಥಾಲಯ ಎಲ್ಲಾ ವಿಭಾಗಳ ಕಾರ್ಯನುಭಗಳ ಮಾಹಿತಿಯನ್ನು ವಿವರಿಸಿದರು.

ಮುಖ್ಯ ಅಥಿತಿಗಳಾಗಿ ಡಾ. ಜಾಗೃತಿ ಬಿ.ದೇಶಮಾನ್ಯ ಡೀನ್ (ವಿದ್ಯಾರ್ಥಿಗಳ ಕ್ಷೇಮಾಬೃದ್ಧಿ) ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರ ಅವರು ಗ್ರಂಥಾಲಯದ ಮಹತ್ವ ಮತ್ತು ಡಾ. ಬಾಬಾ ಸಾಹೇಬ ಅಂಬೇಡ್ಕರವರ ಗ್ರಂಥಾಲಯದ ಬಳಕೆಯ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳಿಗೆ ಗ್ರಂಥಾಲಯದ ನೀತಿ ನಿಯಮಗಳು ಸರಿಯಾಗಿ ಪಾಲನೆ ಮಾಡಬೇಕು ಓದುಗರಿಗೆ ಸರಿಯಾದ ಸಮಯಕ್ಕೆ ಮಾಹಿತಿಯನ್ನು ನೀಡಬೇಕೆಂದು ತಿಳಿಸಿದರು. ಡಾ. ರಾಜಣ್ಣ, ಆಡಳಿತಾಧಿಕಾರಿಗಳು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ಇವರು ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಜ್ಞಾನವು ಹಣದ ಮಾರುಕಟ್ಟೆಯಾಗಬಾರದು ಅದು ವ್ಯಕ್ತಿಗಳ ಸೇವೆ ಮತ್ತು ಅದರ ಬೆಳವಣಿಗೆ ತುಂಬಾ ಮುಖ್ಯ ಎಂದು ಹೇಳಿದರು.

ಅಧ್ಯಕ್ಷೀಯ ನುಡಿಗಳು. ಡಾ. ಮಚೇಂದ್ರನಾಥ ಎಸ್., ಗ್ರಂಥಪಾಲಕರು ಕೃವಿವಿ ರಾಯಚೂರು ಡಾ. ಬಿ.ಆರ್.ಅಂಬೇಡ್ಕರ ಕೇಂದ್ರ ಗ್ರಂಥಾಲಯದ, ಕೃವಿವಿ ರಾಯಚೂರಿನ ಸೌಲಭ್ಯಗಳು ಮತ್ತು ಸೇವೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸಂಕ್ಷಿಪ್ತವಾಗಿ ವಿವರಣೆ ನಿಡಿದರು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ವಿಶ್ವವಿದ್ಯಾಲಯ ಗ್ರಂಥಾಲಯವು ಒಟ್ಟು 70682 ಪುಸ್ತಕಗಳನ್ನು, ONOS (One Nation One Subscription) portal ಮುಖಾಂತರ 150000 ಹೆಚ್ಚಿನ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ನಿಯತಕಾಲಿಕಗಳು, 9625 Bound Volumes, 3630 PhD/ MSc/MTech Theses, 2785 Seminar Reports, 574 PÀÈ¶ ¸ÀA§A¢ü'zÀ Annual Reports, 136 ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ Conference proceedings, 378 Agricultural reports, 46 Bulletin , 73 Souvenir ಒಳಗೊಂಡಿರುತ್ತದೆ ಹಾಗು ಎಸ್ಸಿ–ಎಸ್ಟಿ ವಿದ್ಯಾರ್ಥಿಗಳ ಉಪಯೋಗಕ್ಕಾಗಿ 2450 ಪುಸ್ತಕಗಳ ಃಠಠಞ ಃಚಿಟಿಞ ಸೌಲಭ್ಯ ಹೊಂದಿರುತ್ತದೆ. ಕೃಷಿ ಮತ್ತು ಕೃಷಿ ಸಂಯೋಜಿತ ವಿ — ಜ್ಞಾನದ ವಿದ್ಯಾರ್ಥಿಗಳಿಗೆ, ಶಿಕ್ಷಕರಿಗೆ, ವಿಜ್ಞಾನಿಗಳಿಗೆ, ಕೃಷಿ ಸಂಶೋದಕರಿಗೆ, ನೀತಿ ತಯಾರಿಕರಿಗೆ, ರೈತರಿಗೆ, ಸಂಶೋಧನಾ ಕೇಂದ್ರಗಳಿಗೆ, ಕೃಷಿ ವಿಸ್ತರಣೆ ಶಿಕ್ಷಣ ಘಟಕಗಳಿಗೆ, ಕೃಷಿ ವಿಜ್ಞಾನ ಕೇಂದ್ರಗಳಿಗೆ ಮುಂತಾದ ವಿವಿಧ ಸಂಸ್ಥೆಗಳಿಗೆ ಮಾಹಿತಿ ಸಂಪನ್ಮೂಲಗಳನ್ನು ಮತ್ತು ಸೇವೆಗಳನ್ನು ಒದಗಿಸುವಲ್ಲಿ ವಿಶ್ವವಿದ್ಯಾಲಯ ಗ್ರಂಥಾಲಯವು ಮುಂಚೂಣೆಯಲ್ಲಿದೆ.

ಈ ಒಂದು ಕಾರ್ಯಕ್ರಮಕ್ಕೆ ಗ್ರಂಥಾಲಯ ಸಿಬ್ಬಂದಿಗಲಾದ ಶ್ರೀ ಸಂತೋಷ, ಶ್ರೀ ಉರಕುಂದ, ಶ್ರೀ ರಾಕೇಶ ಪಲ್ಲೆದ ಮತ್ತು ಶ್ರೀ ಪ್ರಮೋದ ಕುಮಾರ ಹಾಗೂ ಇತರರು, ಶಿಕ್ಷಕ/ಶಿಕ್ಷೇಕೆತರ, ವಿದ್ಯರ್ಥಿಗಳು ಉಪಸ್ಥಿತಿಯಲ್ಲಿದರು ಹಾಗೂ ಕುಮಾರಿ. ಅಶ್ವಿನಿ ಕಾರ್ಯಕ್ರಮ ನಿರೂಪಿಸಿದರು, ಪ್ರಾರ್ಥನಗೀತೆಯನ್ನು ಕುಮಾರಿ ಆರತಿ ಹಾಗೂ ಶಿಲ್ಪಾ ಮತ್ತು ಪಕೀರಪ್ಪ ವಂದಿಸಿದರು."

## ಕಾವೇರಿ ನೀರು ಹಂಚಿಕೆ ವಿವಾದ : ಸುಪ್ರೀಂಗೆ ಮೊರೆ ಹೋಗುವುದು ಅನಿವಾರ್ಯ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಕಾವೇರಿ ನೀರು ನಿರ್ವಹಣಾ ಸಮಿತಿಯ ಆದೇಶದಂತೆ ತಮಿಳುನಾಡಿಗೆ ಪ್ರತಿದಿನ 12 ಸಾವಿರ ಕ್ಯೂಸೆಕ್ ನೀರನ್ನು 15 ದಿನಗಳ ಕಾಲ ಹರಿಸಿದರೆ ರಾಜ್ಯದ ಜಲಾಶಯಗಳಿಂದ ಸುಮಾರು 16 ಟಿಎಂಸಿ ನೀರು ಖಾಲಿಯಾಗಲಿದೆ ಎಂದು ಜಲಸಂಪನೂಲ ಸಚಿವ ರಾಮಲಿಂಗಾರೆಡ್ಡಿ ಆತಂಕ ವ್ಯಕ್ತಪಡಿಸಿದ್ದಾರೆ.**



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ 3,500 ಕ್ಯೂಸೆಕ್ ನೀರು ಹರಿಸುವಂತೆ ಆದೇಶಿಸಲಾಗಿತ್ತು. ಅದರಿಂದ ಹೆಚ್ಚಿನ ಪರಿಣಾಮ ಉಂಟಾಗಿರಲಿಲ್ಲ. ಆದರೆ ಇದೀಗ ಪ್ರತಿದಿನ 12 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ನೀಡಿರುವ ಆದೇಶ ದುಬಾರಿಯಾಗಿದೆ ಎಂದರು. ರಾಜ್ಯದಲ್ಲಿನ ನೀರಿನ ಲಭ್ಯತೆಯನ್ನು ಪರಿಗಣಿಸಿ ಅಲ್ಪ ಪ್ರಮಾಣದಲ್ಲಿ ನೀರು ಹರಿಸುವಂತೆ ಸೂಚಿಸಿದ್ದರೆ ಸಮಸ್ಯೆಯಾಗುತ್ತಿರಲಿಲ್ಲ. ತಮಿಳುನಾಡಿನ ಜಲಾಶಯಗಳಲ್ಲಿ ಸಾಕಷ್ಟು ನೀರಿದ್ದು, ಅಂತರ್ಜಲ ಮಟ್ಟವೂ ಉತ್ತಮವಾಗಿದೆ. ಅಲ್ಲದೆ ಮುಂಗಾರು ಉತ್ತಮವಾಗಿದ್ದು, ಹಿಂಗಾರು ಮಳೆಯೂ ಉತ್ತಮವಾಗುವ ನಿರೀಕ್ಷೆಯಿದೆ. ಆದರೆ ಕರ್ನಾಟಕದಲ್ಲಿ ಮುಂಗಾರು ಕೈಕೊಟ್ಟಿದೆ, ಹಿಂಗಾರು ನಿರೀಕ್ಷೆ ಆಶಾದಾಯಕವಾಗಿಲ್ಲ. ಅಂತರ್ಜಲ ಮಟ್ಟ ಕುಸಿದಿದೆ. ಸುಮಾರು 1,500 ಅಡಿ ಆಳಕ್ಕೆ ಕೊರೆದರೂ ನೀರು ಸಿಗದ ಪರಿಸ್ಥಿತಿ ಇದೆ. ಈ ಎಲ್ಲ ಅಂಶಗಳನ್ನು ಜಲಸಂಪನೂಲ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಸೇರಿದಂತೆ ರಾಜ್ಯದ ಹಿರಿಯ ಅಧಿಕಾರಿಗಳು, ಕಾನೂನು ತಜ್ಞರು ಹಾಗೂ ನೀರಾವರಿ ತಜ್ಞರು ಸಿಡಬ್ಲ್ಯೂಆರ್‌ಸಿ ಮುಂದೆ ಸಮರ್ಥ ವಾದ ಮಂಡಿಸಿ, ಮನವರಿಕೆ ಮಾಡಿಕೊಟ್ಟಿದ್ದರೂ, ರಾಜ್ಯದ ವಾದವನ್ನು ಪರಿಗಣಿಸದೆ ಪ್ರತಿದಿನ 12 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಆದೇಶಿಸಿರುವುದು ಸರಿಯಲ್ಲ ಎಂದು ರಾಮಲಿಂಗಾರೆಡ್ಡಿ ಹೇಳಿದರು. ಕಾವೇರಿ ನೀರು ನಿರ್ವಹಣಾ ಸಮಿತಿಯ ಆದೇಶದ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾನೂನು ತಜ್ಞರೊಂದಿಗೆ ನಿನ್ನೆಯಿಂದಲೂ ನಿರಂತರ ಚರ್ಚೆ ನಡೆಸುತ್ತಿದ್ದಾರೆ. ರಾಜ್ಯದ ಹಿತಾಸಕ್ತಿ ಕಾಪಾಡಲು ಸುಪ್ರೀಂಕೋರ್ಟ್ ಮೊರೆ ಹೋಗುವುದು ಅನಿವಾರ್ಯವಾಗಿದ್ದು, ಸರ್ಕಾರ ಅಗತ್ಯವಿರುವ ಎಲ್ಲ ಕಾನೂನು ಕ್ರಮಗಳನ್ನು ಕೈಗೊಳ್ಳಲಿದೆ ಎಂದು ಸಚಿವರು ಸ್ಪಷ್ಟಪಡಿಸಿದರು. ಈಗಾಗಲೇ ರಾಜ್ಯದ ಅಡ್ವೋಕೇಟ್ ಜನರಲ್ ಅವರ ಜೊತೆ ಚರ್ಚೆ ನಡೆಸಲಾಗಿದೆ. ತಮಿಳುನಾಡು ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದ ರಾಜ್ಯದ ವಕೀಲರು ದಾಖಲೆಗಳನ್ನು ಸಲ್ಲಿಸಲಿದ್ದಾರೆ. ಸುಪ್ರೀಂಕೋರ್ಟ್‌ನ ತೀರ್ಪನ್ನು ಆಧರಿಸಿ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದರು.

# ಗ್ರಂಥಾಲಯ ವಿಜ್ಞಾನದ ಪಿತಾಮಹ ಡಾ. ಎಸ್. ಆರ್. ರಂಗನಾಥನ್ ಜನ್ಮದಿನದ ಅಂಗವಾಗಿ ರಾಷ್ಟೀಯ ಗ್ರಂಥಪಾಲಕರ ದಿನವನ್ನು ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಕೊಪ್ಪಳ : ತಾಲೂಕಿನ ಬೆಟಗೇರಿಯ ಸರಕಾರಿ ಪ್ರೌಢಶಾಲೆಯಲ್ಲಿ ಗ್ರಂಥಾಲಯ ವಿಜ್ಞಾನದ ಪಿತಾಮಹ ಡಾ. ಎಸ್. ಆರ್. ರಂಗನಾಥನ್ ಜನ್ಮದಿನದ ಅಂಗವಾಗಿ ರಾಷ್ಟೀಯ ಗ್ರಂಥಪಾಲಕರ ದಿನವನ್ನು ಆಚರಿಸಲಾಯಿತು.**

ಗ್ರಂಥಾಪಾಲಕ, ಗಣಿತ ಶಿಕ್ಷಕ ಮರ್ದಾನಲಿ ಗಡಾದ್ ಪ್ರಾಸ್ತಾವಿಕವಾಗಿ ಮಾತನಾಡಿ, ಇಂದು ನಾವು ಜ್ಞಾನ, ಶಿಕ್ಷಣ ಮತ್ತು ಓದುವ ಸಂಸ್ಕೃತಿಯ ಮಹತ್ವವನ್ನು ಸಾರುವ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆಯನ್ನು ಆಚರಿಸಲು ಇಲ್ಲಿ ಸೇರಿದ್ದೇವೆ. ಪ್ರತಿವರ್ಷ ಆಗಸ್ಟ್ 12ರಂದು ಭಾರತದಲ್ಲಿ ಈ ದಿನವನ್ನು ಗ್ರಂಥಾಲಯ ವಿಜ್ಞಾನದ ಪಿತಾಮಹರಾದ ಡಾ. ಎಸ್. ಆರ್. ರಂಗನಾಥನ್ ಅವರ ಜನ್ಮದಿನದ ಸ್ಮರಣಾರ್ಥ ಆಚರಿಸಲಾಗುತ್ತದೆ.

ಗ್ರಂಥಾಲಯವೆಂದರೆ ಕೇವಲ ಪುಸ್ತಕಗಳನ್ನು ಸಂಗ್ರಹಿಸಿಡುವ ಸ್ಥಳವಲ್ಲ. ಅದು ಜ್ಞಾನದ ಭಂಡಾರ, ಚಿಂತನೆಯ ಕೇಂದ್ರ, ಕಲಿಕೆಯ ತಾಣ ಮತ್ತು ವ್ಯಕ್ತಿತ್ವ ವಿಕಾಸದ ವೇದಿಕೆ. ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ, ಸ್ವಯಂ



ಕಲಿಕೆಯ ಮನೋಭಾವ, ವಿಚಾರಶಕ್ತಿ ಹಾಗೂ ಸೃಜನಶೀಲತೆಯನ್ನು ಬೆಳೆಸುವಲ್ಲಿ ಗ್ರಂಥಾಲಯದ ಪಾತ್ರ ಅತ್ಯಂತ ಮಹತ್ವದ್ದಾಗಿದೆ.ಡಾ. ಎಸ್. ಆರ್. ರಂಗನಾಥನ್ ಅವರು ಗ್ರಂಥಾಲಯ ವಿಜ್ಞಾನಕ್ಕೆ ನೀಡಿದ ಕೊಡುಗೆ ಅಪಾರ. ಅವರ "ಗ್ರಂಥಾಲಯ ವಿಜ್ಞಾನದ ಐದು ನಿಯಮಗಳು" ಇಂದಿಗೂ ಗ್ರಂಥಾಲಯ ಸೇವೆಗಳಿಗೆ ಮಾರ್ಗದರ್ಶಕವಾಗಿವೆ.

"ಪುಸ್ತಕಗಳು ಬಳಕೆಗೆ" ಎಂಬ ಅವರ ಆಶಯವು ಪುಸ್ತಕಗಳು ಕಪಾಟಿನಲ್ಲಿ ಉಳಿಯದೆ ಓದುಗರ ಕೈಗೆ ತಲುಪಬೇಕು ಎಂಬ ಸಂದೇಶವನ್ನು ನೀಡುತ್ತವೆ. ಈ ಪವಿತ್ರ ದಿನದಂದು ಡಾ. ಎಸ್. ಆರ್ ರಂಗನಾಥನ್ ಅವರ ಆದರ್ಶಗಳನ್ನು ಸ್ಮರಿಸುತ್ತ ನಮ್ಮ ಶಾಲೆಯ ಗ್ರಂಥಾಲಯವನ್ನು ಹೆಚ್ಚು ಸಕ್ರೀಯವಾಗಿ ಬಳಸೋಣ. ಓದೋಣ, ಅರಿಯೋಣ, ಜ್ಞಾನವಂತರಾಗೋಣ ಎಂಬ ಸಂಕಲ್ಪ ಮಾಡೋಣ ಎಂದರು.

ಹಿರಿಯ ಶಿಕ್ಷಕರಾದ ಗಿರಿಯಪ್ಪ ಹಾರನಹಳ್ಳಿ ಮಾತನಾಡಿ, ನಮ್ಮ ಶಾಲೆಯ ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರತಿದಿನ ಸ್ವಲ್ಪ ಸಮಯವನ್ನು ಪುಸ್ತಕ ಓದುವುದಕ್ಕೆ ಮೀಸಲಿಡಬೇಕು. ಪುಸ್ತಕವನ್ನು ಸ್ನೇಹಿತನನ್ನಾಗಿ ಮಾಡಿಕೊಂಡಾಗ ಜ್ಞಾನ ವಿಸ್ತಾರವಾಗಿ ಭಾಷಾ ಕೌಶಲ್ಯ ಹೆಚ್ಚುತ್ತದೆ ಮತ್ತು ಆತ್ಮವಿಶ್ವಾಸ ಬೆಳೆಯುತ್ತದೆ ಎಂದರು. ಶಿಕ್ಷಣ ಪ್ರೇಮಿಗಳಾದ ಶಂಕ್ರಪ್ಪ ಬಡಿಗೇರ್ ಮಾತನಾಡಿ ವಿದ್ಯಾರ್ಥಿಗಳು ಗ್ರಂಥಾಲಯವನ್ನು ಮಕ್ಕಳು ಸದ್ಭಳಕೆ ಮಾಡಿಕೊಳ್ಳಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ಅವರಿಗೆ ಪ್ರೋತ್ಸಾಹ ನೀಡುತ್ತಿರುವ ಗ್ರಂಥಪಾಲಕರ ಕಾರ್ಯ ಉತ್ತಮವಾಗಿದೆ ಎಂದರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮುಖ್ಯ ಗುರುಗಳಾದ ಪರಶುರಾಮ ಸಾಲ್ಮನಿ ಮಾತನಾಡಿ ಮಕ್ಕಳು ಪ್ರತಿದಿನ ಅರ್ಧ ಗಂಟೆಯಾದರೂ ಪುಸ್ತಕ ಓದುವ ಹವ್ಯಾಸ ಬೆಳಿಸಿಕೊಳ್ಳಬೇಕೆಂದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಶಿಕ್ಷಕರಾದ ರಾಜಾಸಾಬ್ ಬಡಿಗೇರ್, ರವಿಕಿರಣ್ ಟಿಕಾ ರೆ ವೀರಯ್ಯ ಪೂಜಾರ್ ಶಾಂತವೀರಯ್ಯ ಕಳ್ಳಿಮಠ, ನಾರಾಯಣಪ್ಪ ಬಿಸನಳ್ಳಿ, ಸುನೀತಾ ಯಾಳಗಿ ಸೋಮಣ್ಣ ತಳಕಲ್, ರಾಧಿಕಾ ಎಚ್ ಮುಂತಾದವರು ಹಾಜರಿದ್ದರು.

# ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಕ್ರಿಯವಾಗಿ ರಾಜಕಾರಣದಲ್ಲಿ ನಿರಂತರವಾಗಿರುತ್ತಾರೆ – ನಿರುಪಾದೆಪ್ಪ ವಕೀಲರು

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು – ಅಖಿಲ ಕರ್ನಾಟಕ ಎಸ್. ಸಿದ್ದರಾಮಯ್ಯ ಅಭಿಮಾನಿ ಬಳಗದ ವತಿಯಿಂದ ಕೆ. ಲಿಂಗರಾಜ ಹೊಸಳ್ಳಿ ಅವರ ಅಧ್ಯಕ್ಷತೆಯಲ್ಲಿ ಬಡವರ ಬಂಧು ಸರ್ವ ಸಮಾಜದ ಪ್ರೀತಿ ಗಳಿಸಿರುವ ಜನಪ್ರಿಯ ಮಾಜಿ ಮುಖ್ಯಮಂತ್ರಿಗಳಾದ ಎಸ್. ಸಿದ್ದರಾಮಯ್ಯ ಅವರ 79ನೇ ವರ್ಷದ ಜನ್ಮದಿನ ಸಮಾರಂಭ ಕಾರ್ಯಕ್ರಮವು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ದಾಶ್ರಮ ಹಾಗೂ ವಯಸ್ಕರ ಬುದ್ದಿಮಾಂದ್ಯ ಆಶ್ರಮದಲ್ಲಿ ಆಶ್ರಯದಾತರುಗಳಿಗೆ ಹೊಸ ವಸ್ತ್ರಗಳನ್ನು ವಿತರಿಸಿ ಮಹಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲುಗಳನ್ನುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿಸಲಾಯಿತು.**

ಈ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಗಣ್ಯರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರ ಅಪ್ಪಟ ಅಭಿಮಾನಿಗಳಾದ ನಿರುಪಾದೆಪ್ಪ ಗುಡಿಹಾಳ ವಕೀಲರು ಅವರನ್ನು ಆಶ್ರಮದ ವತಿಯಿಂದ ಸನ್ಮಾನಿಸಿ ಗೌರವಿಸಿ ಶುಭ ಹಾರೈಸಿದರು. ಈ ಕಾರ್ಯಕ್ರಮದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿ ನಿರುಪಾದೆಪ್ಪ ಗುಡಿಹಾಳ ವಕೀಲರು ಮಾತನಾಡಿ



ನಮ್ಮ ರಾಜ್ಯ ಹಾಗೂ ದೇಶ ಕಂಡಂತಹ ಅಪ್ರತಿಮ ರಾಜಕಾರಣಿಯಾದ ಸಿದ್ದರಾಮಯ್ಯ ಅವರ 79ನೇ ವರ್ಷದ ಜನ್ಮದಿನವನ್ನು ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷ ವಿನೂತನವಾದ ಕಾರ್ಯಗಳ ಮೂಲಕ ನಮ್ಮಕೆ. ಲಿಂಗರಾಜ ಹಮ್ಮಿಕೊಂಡಿರುವುದು.

ಬಳ ಅತ್ಯಂತ ಮಹತ್ವಪೂರ್ಣ ಕಾರ್ಯವಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆದರ್ಶದ ಜೀವನವೇ ನಮಗೆ ಸ್ಫೂರ್ತಿ ಕೆಳ ಹಂತದಿಂದ ಹಲವಾರು ಹೋರಾಟಗಳ ಮೂಲಕ ನಮ್ಮ ರಾಜ್ಯದಲ್ಲಿ ಅತಿ ಹೆಚ್ಚು ಅಧಿಕಾರ ನೀಡಿ ರಾಜ್ಯದ ಏಳಿಗೆಗೆ ಕಾರಣರಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸಕ್ರಿಯವಾಗಿ ರಾಜಕಾರಣದಲ್ಲಿ ನಿರಂತರವಾಗಿರುತ್ತಾರೆ. ಅವರ ಈ ಜನ್ಮದಿನದಂದು ಕಾರುಣ್ಯ ಆಶ್ರಮದಲ್ಲಿರುವ ಎಲ್ಲಾ ದೇವರುಗಳ ಸಮಸ್ತ ನಾಡಿನ ದೇಶದ ಜನರು ಅವರನ್ನು ಹರಸಿ ಹಾರೈಸಿ ಆಶೀರ್ವದಿಸುತ್ತಿದ್ದಾರೆ. ಅವರ ಆದರ್ಶದಂತೆ ಕಾರುಣ್ಯ ಆಶ್ರಮದ ಸೇವೆಯು ಕೂಡ ರಾಜ್ಯದ ಸರ್ವ ಸಮಾಜದ ಜನರ ಪ್ರೀತಿಗೆ ಪಾತ್ರವಾಗಿದೆ. ಈ ಆಶ್ರಮದಲ್ಲಿರುವವರು ಅನಾಥರಲ್ಲ ಇವರೆಲ್ಲರಿಗೂ ತನ್ನ ಜೋಳಿಗೆಯ ಮೂಲಕ ಪ್ರೀತಿ ಹಂಚುತ್ತಿರುವ ಚನ್ನಬಸವ ಸ್ವಾಮಿ ನಮ್ಮ ಕರುನಾಡಿನ ಕರುಣಾಮಯಿಗಳಾಗಿದ್ದಾರೆ. ಇಂತಹ ಒಂದು ಪುಣ್ಯಭೂಮಿಯಲ್ಲಿ ನಮ್ಮ ಸಿದ್ದರಾಮಯ್ಯನವರ ಜನ್ಮದಿನ ಅರ್ಥಪೂರ್ಣ ಎಂದು ಮಾತನಾಡಿದರು.

ನಂತರ ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಡಾ. ನಾಗವೇಣಿ.ಎಸ್. ಪಾಟೀಲ್ ಮಾತನಾಡಿ ನಮ್ಮ ನೆಚ್ಚಿನ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರತಿಯೊಂದು ಕ್ಷೇತ್ರದಲ್ಲಿ ಅಭೂತಪೂರ್ವ ಕೊಡುಗೆ ನೀಡಿದ್ದಾರೆ. ಅವರ ಇಂದಿನ ಈ ಜನ್ಮದಿನ ಕಾರ್ಯಕ್ರಮದಲ್ಲಿ ಅವರಿಗೆ ಮತ್ತು ಅವರ ಕುಟುಂಬಕ್ಕೆ ಆಯಸ್ಸು ಆಯುರಾರೋಗ್ಯ ಸುಖ ಶಾಂತಿ ನೆಮ್ಮದಿ ದೊರೆಯಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ ನಾವೆಲ್ಲರೂ ಅವರ ಜನ್ಮ ದಿನದಲ್ಲಿ ಶುಭ ಕೋರುತ್ತಿದ್ದೇವೆ ಎಂದು ಮಾತನಾಡಿದರು. ನಂತರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಅಖಿಲ ಕರ್ನಾಟಕ ಎಸ್. ಸಿದ್ದರಾಮಯ್ಯ ಅಭಿಮಾನಿ ಬಳಗದ ಸಿಂಧನೂರು ತಾಲೂಕಾಧ್ಯಕ್ಷರಾದ ಕೆ. ಲಿಂಗರಾಜ ಹೊಸಳ್ಳಿ ಮಾತನಾಡಿ ನಮ್ಮ ನೆಚ್ಚಿನ ನಾಯಕರು ಕರುನಾಡಿನ ಕರುಣಾಮಯಿಗಳಾದ ನಮ್ಮೆಲ್ಲರಿಗೆ ಆದರ್ಶ ಪ್ರಿಯರಾದ ಎಸ್. ಸಿದ್ದರಾಮಯ್ಯ ಸಾಹೇಬರಿಗೆ ಜನ್ಮದಿನದ ಶುಭಾಶಯಗಳು.

ಸರ್ವ ಸಮಾಜದ ಸಮಾನತೆಯ ಹರಿಕಾರರಾದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಾಮಾಣಿಕ ರಾಜಕಾರಣಿಗಳು ಅವರ ಹಲವಾರು ಯೋಜನೆಗಳು ಅವರ ಸಾಧನೆಗಳು ಅವರ ಶಕ್ತಿ ರಾಷ್ಟ್ರ ರಾಜಕಾರಣಕ್ಕೆ ಮಾರ್ಗದರ್ಶಕವಾಗಿದೆ. ಇಂದು ಅವರ ಜನ್ಮದಿನದ ಶುಭ ಸಂದರ್ಭದಲ್ಲಿ ಆಶ್ರಮದಲ್ಲಿನ ಎಲ್ಲ ಹಿರಿಯರ ಆಶೀರ್ವಾದ ಮತ್ತು ವಯಸ್ಕರ ಬುದ್ಧಿಮಾಂದ್ಯರ ಹಾಗೂ ನಾಡಿನ ಜನರ ಆಶೀರ್ವಾದ ನಮ್ಮ ಸಾಹೇಬರ ಮೇಲಿರಲಿ ಎಂದು ಮಾತನಾಡಿ ಸಿದ್ದರಾಮಯ್ಯ ಅವರ ಹಲವಾರು ಸಾಧನೆಗಳ ಬಗ್ಗೆ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೆ. ಲಿಂಗರಾಜ ಹೊಸಳ್ಳಿ ಅಧ್ಯಕ್ಷರು ಅಖಿಲ ಕರ್ನಾಟಕ ಎಸ್. ಸಿದ್ದರಾಮಯ್ಯ ಅಭಿಮಾನಿ ಬಳಗ ಸಿಂಧನೂರು. ನಿರುಪಾದೆಪ್ಪ ಗುಡಿಹಾಳ ವಕೀಲರು ಸಿಂಧನೂರು.ಡಾ. ನಾಗವೇಣಿ. ಎಸ್. ಪಾಟೀಲ್ ಕಾರ್ಯದರ್ಶಿಗಳು ಕರ್ನಾಟಕ ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ.

ಚಿದಾನಂದಪ್ಪ ವಕೀಲರು ಹೊಸಳ್ಳಿ. ಕೆ.ಚಂದ್ರಕಲಾ ಹೊಸಳ್ಳಿ. ಅಂಬಣ್ಣ ಸಾಸಲಮರಿ ಪತ್ರಕರ್ತರು ಸಿಂಧನೂರು. ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಹರೇಟನೂರು. ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ.ಮಹಾಂತೇಶ ದೋಟಿಹಾಳ.ಬಸವಸ್ವಾಮಿ. ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಎಸ್.ಸಿದ್ದರಾಮಯ್ಯ ಅವರ ಹಲವಾರು ಅಭಿಮಾನಿಗಳು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

**IOCL ನೇಮಕಾತಿ 2026 ವಿವಿಧ 'ರೆವೆನ್ಯೂ ಅಕೌಂಟೆಂಟ್' ಮತ್ತು 'ಸರ್ವೇಯರ್' ಹುದ್ದೆಗಳಿಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ 12 ಆಗಸ್ಟ್ 2026**

IOCL ನೇಮಕಾತಿ 2026: ವಿವಿಧ 'ರೆವೆನ್ಯೂ ಅಕೌಂಟೆಂಟ್' ಮತ್ತು 'ಸರ್ವೇಯರ್' ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (IOCL) ತನ್ನ ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ 'ರೆವೆನ್ಯೂ ಅಕೌಂಟೆಂಟ್' ಮತ್ತು 'ಸರ್ವೇಯರ್' ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರು (ಕರ್ನಾಟಕ) ಅಥವಾ ಚೆನ್ನೈ (ತಮಿಳುನಾಡು) ಪ್ರದೇಶಗಳಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 25-ಆಗಸ್ಟ್-2026 ರೊಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: iocl.com

## ಕಲ್ಯಾಣ ಕರ್ನಾಟಕ ಭದ್ರತೆ,ಅಭಿವೃದ್ಧಿ, ಉದ್ಯೋಗಕ್ಕಾಗಿ ನೂತನ ಕೈಗಾರಿಕಾ ಭದ್ರತೆ ಪಡೆ ಸೃಜನೆಗೆ ಪತ್ರ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ : ಕಲ್ಯಾಣ ಕರ್ನಾಟಕ ಪ್ರದೇಶದ ಭದ್ರತೆ ದೃಷ್ಟಿಯಿಂದ ಕಲ್ಬುರ್ಗಿಯಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಪ್ರತ್ಯೇಕವಾದ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ 5ನೇ ಪಡೆಯನ್ನು ಸೃಜಿಸುವಂತೆ ಕರ್ನಾಟಕ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಸದಸ್ಯ ಮೋಹನ್ ಕುಮಾರ್ ದಾನಪ್ಪನವರು ಒಳಾಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದಾರೆ.**

ಕರ್ನಾಟಕ ರಾಜ್ಯದಲ್ಲಿ ಪ್ರಮುಖ ಸೂಕ್ಷ್ಮ ಸ್ಥಾವರಗಳ ಭದ್ರತೆಗಾಗಿಯೇ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯನ್ನು ಸೃಜಿಸಿದ್ದು ಪ್ರಸ್ತುತವಾಗಿ 4 ಪಡೆಗಳು ಕರ್ತವ್ಯ ನಿರ್ವಹಿಸುತ್ತಿದ್ದು 1ನೇ ಪಡೆ ಬೆಂಗಳೂರು, 2ನೇ ಪಡೆ ಶಿವಮೊಗ್ಗ, 3ನೇ ಪಡೆ ಧಾರವಾಡ ಮತ್ತು 4ನೇ ಪಡೆ ಮೈಸೂರಿನಲ್ಲಿದ್ದು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಯಾವುದೇ ಕೇಂದ್ರಸ್ಥಾನವಿರುವುದಿಲ್ಲಾ, ಬೀದರ್ ವಿಮಾನ ನಿಲ್ದಾಣ,ಕಲಬುರಗಿ ವಿಮಾನ ನಿಲ್ದಾಣ, ಕಲ್ಬುರ್ಗಿ ಹೈಕೋರ್ಟ್ ಪೀಠ, ಕಲಬುರಗಿ ಕೇಂದ್ರ ಕಾರಾಗೃಹ, ಬಳ್ಳಾರಿ ಕೇಂದ್ರ ಕಾರಾಗೃಹ, ಜಿಂದಾಲ್ ವಿಮಾನ ನಿಲ್ದಾಣ, ಬಿಟಿಪಿಎಸ್ ಕುಡಿತಿನಿ, ಬಳ್ಳಾರಿ ಹಾಗೂ



ತುಂಗಭದ್ರಾ ಜಲಾಶಯ ವಿಜಯನಗರ ಜಿಲ್ಲೆ ಈ 8 ಘಟಕಗಳಿಗೆ ಸರಿಸುಮಾರು 600ಕ್ಕಿಂತ ಹೆಚ್ಚು ಹುದ್ದೆಗಳು ಮಂಜೂರಾಗಿದ್ದು ಸದರಿ ಘಟಕಗಳಿಗೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯು ಭದ್ರತೆ ಒದಗಿಸುತ್ತಿರುವುದರೊಂದಿಗೆ ಹಟ್ಟಿ ಚಿನ್ನದ ಗಣಿ, ಯರಮರಸ್ ಶಾಖೋತ್ಪನ್ನ ಸ್ಥಾವರ. ನಾರಾಯಣಪುರ, ಕಾರಂಜಾ ಜಲಾಶಯಗಳು ಹಾಗೂ ಇನ್ನಿತರೆ ಸೂಕ್ಷ್ಮ ಸ್ಥಾವರಗಳ ಸೆಕ್ಯೂರಿಟಿ ಆಡಿಟ್ ಕಾರ್ಯ ಮುಗಿದಿದ್ದು ಸಿಬ್ಬಂದಿಗಳ ಕೊರತೆಯಿಂದಾಗಿ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತೆ ಪಡೆಯ ಸಿಬ್ಬಂದಿಗಳನ್ನು ನಿಯೋಜಿಸಿರುವುದಿಲ್ಲಾ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ 8 ಸೂಕ್ಷ್ಮ ಸ್ಥಾವರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸುಮಾರು 400 ಅಧಿಕಾರಿ ಮತ್ತು ಸಿಬ್ಬಂದಿರವರಿಗೆ ಸರಿಯಾದ ರೀತಿಯಲ್ಲಿ ಪ್ರಾದೇಶಿಕ ಸ್ಥಳೀಯ ವೃಂದ ರಚಿಸದಿರುವುದ್ದರಿಂದ ಸೇವಾ ಜೇಷ್ಠತೆಯಿದ್ದರೂ ಸಹ ಅವರು ಮುಂಬಡ್ತಿಯಿಂದ ವಂಚಿತರಾಗಿರುತ್ತಾರೆ. ಪ್ರಸ್ತುತ ಕೆ.ಎಸ್.ಐ.ಎಸ್.ಎಫ್ ನ 4ನೇ ಪಡೆ ಮೈಸೂರಿನಲ್ಲಿ ಸೃಜಿಸಿದಂತೆ ಈಗಾಗಲೇ ಈ ಭಾಗದಲ್ಲಿ ಕರ್ತವ್ಯನಿರ್ವಹಿಸುತ್ತಿರುವ 8 ಸೂಕ್ಷ್ಮ ಸ್ಥಾವರಗಳ ಎಲ್ಲಾ ಹುದ್ದೆಗಳನ್ನು ಕಲ್ಯಾಣ ಕರ್ನಾಟಕ ಭಾಗದ ಬೆಟಾಲಿಯನ್‌ಗೆ ವರ್ಗಾಯಿಸಿ ಇನ್ನುಳಿದ ಹುದ್ದೆಗಳನ್ನು ಪ್ರಸ್ತುತವಾಗಿ ಖಾಲಿಯಿರಿಸಿ ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ನೇಮಿಸಿಕೊಳ್ಳುವುದರ ಮೂಲಕ ಭರ್ತಿ ಮಾಡಿಕೊಳ್ಳಬಹುದಾಗಿದ್ದು ಮತ್ತು ಈಗಿರುವ ಕಲಬುರ್ಗಿಯ ಹಳೇ ಐಜಿಪಿ ಕಛೇರಿಯನ್ನು ಕೆ.ಎಸ್.ಐ.ಎಸ್.ಎಫ್‌ನ 5ನೇ ಪಡೆ ಕಮಾಂಡೆಂಟ್ ರವರ ಕಾರ್ಯಲಯವಾಗಿ ತಾತ್ಕಾಲಿಕವಾಗಿ ಬಳಸಿಕೊಂಡು ಒಂದು ಬೆಟಾಲಿಯನ್ ಸೃಜನೆ ಮಾಡುವುದ್ದರಿಂದ ಒಂದು ಪೂರ್ಣ ಪ್ರಮಾಣದ ಬೆಟಾಲಿಯನ್ ಗೆ ಬೇಕಾಗುವಷ್ಟು ಮತ್ತು ಅದಕ್ಕಿಂತ ಹೆಚ್ಚು ಸೂಕ್ಷ್ಮ ಸ್ಥಾವರಗಳು ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿದ್ದು ಈ ಎಲ್ಲಾ ಸೂಕ್ಷ್ಮ ಸ್ಥಾವರಗಳ ಸಂಪೂರ್ಣ ಭದ್ರತೆಯ ವೆಚ್ಚವನ್ನು ಆಯಾ ಸ್ಥಾವರಗಳೇ ಭರಿಸಲು ಸಿದ್ದವಿರುವುದ್ದರಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲವಾದ್ದರಿಂದ ಕಲ್ಯಾಣ ಕರ್ನಾಟಕ ಭಾಗಕ್ಕೆ ಪ್ರತ್ಯೇಕವಾದ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯ ಸೃಜನೆ ಮಾಡುವುದ್ದರಿಂದ ಕಲ್ಯಾಣ ಕರ್ನಾಟಕ ಪ್ರದೇಶದ ಸೂಕ್ಷ್ಮ ಸ್ಥಾವರಗಳ ಭದ್ರತೆ ಮತ್ತು ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸುವ ಹಾಗೂ 371ಜೆ ಸಮರ್ಪಕವಾಗಿ ಜಾರಿಮಾಡುವ ಅತ್ಯವಶ್ಯಕವಿರುವುದ್ದರಿಂದ ಕಲ್ಯಾಣ ಕರ್ನಾಟಕ ಭಾಗದ ಯುವಕರಿಗೆ ಉದ್ಯೋಗ ನೀಡಲು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳ ಸೇವಾ ಹಿರಿತನದ ಮುಂಬಡ್ತಿಯನ್ನು ಸರಿಪಡಿಸಲು ಹಾಗೂ ಅಭಿವೃದ್ಧಿಗಾಗಿ ಕಲಬುರಗಿಯನ್ನು ಕೇಂದ್ರ ಸ್ಥಾನವನ್ನಾಗಿಸಿ ಈಗಿರುವ ಹುದ್ದೆಗಳನ್ನು ಮರು ಹೊಂದಾಣಿಕೆ ಮಾಡಿ ಸರ್ಕಾರಕ್ಕೆ ಆರ್ಥಿಕ ಹೊರೆಯಾಗದಂತೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಪೂರ್ಣ ಪ್ರಮಾಣದ ಪ್ರತ್ಯೇಕವಾದ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯನ್ನು ಮಂಜೂರು ಮಾಡುವಂತೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

## ರಾಜ್ಯಾದ್ಯಂತ ತಂಬಾಕು, ನಿಕೋಟಿನ್ ಉತ್ಪನ್ನಗಳ ವಿರುದ್ಧ ಸಮರ: ಗುಟ್ಕಾ, ಪಾನ್ ಮಸಾಲಾ ಒಂದು ವರ್ಷ ನಿಷೇಧ

**ನೈಜ್ಯ ದೆಸೆ ನ್ಯೂಸ್**

**ಬೆಂಗಳೂರು: ಸಾರ್ವಜನಿಕ ಆರೋಗ್ಯ ಹಿತದೃಷ್ಟಿಯಿಂದ ಕರ್ನಾಟಕ ಸರ್ಕಾರವು ತಂಬಾಕು ಮತ್ತು ನಿಕೋಟಿನ್ ಯುಕ್ತ ಗುಟ್ಕಾ ಹಾಗೂ ಪಾನ್ ಮಸಾಲಾ ಉತ್ಪನ್ನಗಳನ್ನು ಒಂದು ವರ್ಷದ ಅವಧಿಗೆ ರಾಜ್ಯಾದ್ಯಂತ ನಿಷೇಧಿಸಿದೆ. ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಆಗಸ್ಟ್ 10ರಂದು ಹೊರಡಿಸಿದ ಅಧಿಸೂಚನೆಯನ್ವಯ ನಿಯಮ ಉಲ್ಲಂಘಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದ್ದು, ವ್ಯಸನಮುಕ್ತ ಕರ್ನಾಟಕಕ್ಕೆ ಸಹಕರಿಸಲು ಮನವಿ ಮಾಡಿದೆ.**



ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ರಾಜ್ಯಾದ್ಯಂತ ಕಳಪೆ ಹೋಟೆಲ್‌ಗಳು ಹಾಗೂ ನಿಯಮಬಾಹಿರ ಕಾಸ್ಮೆಟಿಕ್ (ಸೌಂದರ್ಯವರ್ಧಕ) ಉದ್ಯಮಗಳ ವಿರುದ್ಧ ಸರಣಿ ದಾಳಿ ನಡೆಸಿ ಬಿಸಿ ಮುಟ್ಟಿಸಿದ್ದ ಬೆನ್ನಲ್ಲೇ ಸಾರ್ವಜನಿಕರ ಆರೋಗ್ಯ ರಕ್ಷಣೆ ಹಾಗೂ ವ್ಯಸನಮುಕ್ತ ಕರ್ನಾಟಕ ನಿರ್ಮಾಣದ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಒಂದು ಮಹತ್ವದ ನಿರ್ಧಾರ ಕೈಗೊಂಡಿದೆ. ತಂಬಾಕು ಮತ್ತು ನಿಕೋಟಿನ್ ಹೊಂದಿರುವ ಗುಟ್ಕಾ ಹಾಗೂ ಪಾನ್ ಮಸಾಲಾ ಉತ್ಪನ್ನಗಳ ತಯಾರಿಕೆ, ಸಂಗ್ರಹಣೆ, ಸಾಗಣೆ, ವಿತರಣೆ ಮತ್ತು ಮಾರಾಟವನ್ನು ರಾಜ್ಯಾದ್ಯಂತ ಒಂದು ವರ್ಷದ ಅವಧಿಗೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆಗಸ್ಟ್ 10ರಿಂದಲೇ ಜಾರಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ-2006ರ ಕಲಂ 30(2)(a) ಸೇರಿದಂತೆ Food Safety and Standards Regulations, 2011ರ ನಿಯಮ 2.3.4 ಅಡಿಯಲ್ಲಿ ಈ ಕಠಿಣ ಕ್ರಮ ಜರುಗಿಸಲಾಗಿದೆ. ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು 2026ರ ಆಗಸ್ಟ್ 10ರಂದು ಈ ಸಂಬಂಧ ಅಧಿಕೃತ ಅಧಿಸೂಚನೆ ಹೊರಡಿಸಿದ್ದು, ಅಧಿಸೂಚನೆ ಹೊರಡಿಸಿದ ದಿನಾಂಕದಿಂದಲೇ ಈ ಆದೇಶ ಜಾರಿಗೆ ಬಂದಿದೆ. ಪ್ಯಾಕ್ ಮಾಡಿದ ಅಥವಾ ಪ್ರತ್ಯೇಕವಾಗಿ ಮಾರಾಟ ಮಾಡುವ ಎಲ್ಲಾ ಮಾದರಿಯ ನಿಷೇಧಿತ ತಂಬಾಕು ಉತ್ಪನ್ನಗಳ ಮೇಲೆಯೂ ಇಲಾಖೆ ತೀವ್ರ ನಿಗಾ ಇರಿಸಿದೆ.

## ದಲಿತ ಮುಖಂಡ ಭೂಮಾನಂದ ಹತ್ಯೆ: ಆರೋಪಿಗಳ ಬಂಧನಕ್ಕೆ ಆಗ್ರಹ

**ನೈಜ್ಯ ದೆಸೆ ನ್ಯೂಸ್**

**ಮಾನ್ವಿ: ರಾಜ್ಯದ ರಾಯಚೂರು, ಯಾದಗಿರಿ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿ ಸಮುದಾಯದವರ ಮೇಲೆ ಜಾತಿ ಆಧಾರಿತ ದೌರ್ಜನ್ಯ, ಹಲ್ಲೆ, ಸಾಮಾಜಿಕ ಬಹಿಷ್ಕಾರ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಗಳು ನಿರಂತರವಾಗಿ ನಡೆಯುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ದಲಿತ ಮುಖಂಡ ಪಿ.ತಿಪ್ಪಣ್ಣ ಬಾಗಲವಾಡ ಹೇಳಿದರು.**

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ದಲಿತ ಹಾಗೂ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಮುಖ್ಯಮಂತ್ರಿ ಅವರಿಗೆ ತಹಶೀಲ್ದಾರ್ ಭೀಮರಾಯ ಬಿ. ರಾಮಸಮುದ್ರ ಅವರ ಮೂಲಕ ಮನವಿ ಸಲ್ಲಿಸಿ ಅವರು ಮಾತನಾಡಿದರು. ದೇವದುರ್ಗ ತಾಲೂಕಿನ ಹದಿನಾಳ ಗ್ರಾಮದಲ್ಲಿ ಆಗಸ್ಟ್ 4ರಂದು ಯುವ



ದಲಿತ ಮುಖಂಡ ಭೂಮಾನಂದ ಅವರ ಹತ್ಯೆಯಾಗಿದ್ದು, ಪ್ರಕರಣದಲ್ಲಿ ಭಾಗಿಯಾದ ಎಲ್ಲಾ ಆರೋಪಿಗಳನ್ನು ಕೂಡಲೇ ಪತ್ತೆಹಚ್ಚಿ ಬಂಧಿಸಬೇಕು. ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವುದರ ಜೊತೆಗೆ ಅವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಹತ್ಯೆಯಾದ ಭೂಮಾನಂದ ಅವರ ಕುಟುಂಬ ಹಾಗೂ ಪ್ರಕರಣದ ಸಾಕ್ಷಿಗಳಿಗೆ ಪೊಲೀಸ್ ಇಲಾಖೆಯಿಂದ ಸೂಕ್ತ ರಕ್ಷಣೆ ಮತ್ತು ಭದ್ರತೆ ಒದಗಿಸಬೇಕು. ಕುಟುಂಬಕ್ಕೆ ?1 ಕೋಟಿ ಪರಿಹಾರ ನೀಡಬೇಕು ಹಾಗೂ ಕುಟುಂಬದ ಒಬ್ಬ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು.

ದೇವಸ್ಥಾನ ಪ್ರವೇಶಕ್ಕೆ ಅಡ್ಡಿಪಡಿಸುವುದು ಹಾಗೂ ಸಾಮಾಜಿಕ ಬಹಿಷ್ಕಾರ ವಿಧಿಸುವವರ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಬೇಕು. ತಾಲೂಕು ಮಟ್ಟದಲ್ಲಿ ಶಾಂತಿ ಸಭೆ ನಡೆಸಿ ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆ ಕಾಪಾಡಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರಿಗೆ ಸೂಕ್ತ ಭದ್ರತೆ ಒದಗಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಬಿಎಸ್‌ಪಿ ಪಕ್ಷದ ರಾಜ್ಯ ಕಾರ್ಯದರ್ಶಿ ಶ್ಯಾಮಸುಂದರ ಕುಂಬದಾಳ್, ಹನುಮಂತರಾಯ ಕಪ್ಪಗಲ್, ಹನುಮಂತ ಉದ್ಬಳ್, ಹೆಚ್. ಹನುಮಂತ ಸೀಕಲ್, ಪ್ರಭುರಾಜ್ ಕೊಡ್ಲಿ, ಬಸಪ್ಪ, ಚನ್ನಬಸವ ಮಾಡಗಿರಿ, ಮೌನೇಶ, ಬಸವರಾಜ, ದುರುಗೇಶ ನೀರಮಾನ್ವಿ, ಲಕ್ಷ್ಮಣ ಜಾನೆಕಲ್, ನರಸಪ್ಪ ಜೂಕುರು, ಬಸವರಾಜ ಜಾನೇಕಲ್, ಶಿವರಾಜ ಉಮಳಿಹೊಸೂರು, ಕಾಶಿನಾಥ ಕುರ್ಡಿ, ರೇಣುಕಪ್ಪ, ಶಿವರಾಜ, ಈಶಪ್ಪ ಬೈಲಮಾರ್ಚೆಡ್, ಸಿದ್ದಪ್ಪ ಬ್ಯಾಗವಾಟ, ಹನುಮಂತ ಕೋಟೆ, ರಾಮು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ರಾಷ್ಟ್ರೀಯ ಗ್ರಂಥ ಪಾಲಕರ ದಿನ ಆಚರಣೆ

**ನೈಜ್ಯ ದೆಸೆ ನ್ಯೂಸ್**

**ಬಳ್ಳಾರಿ / ಕಂಪ್ಲಿ : ತಾಲೂಕಿನ ಎಮ್ಮಿಗನೂರು ಗ್ರಾಮದ ಶ್ರೀ ಜಡಿಸಿದ್ದೇಶ್ವರ ಎಜುಕೇಶನಲ್ ಟ್ರಸ್ಟ್ ವತಿಯಿಂದ ಡಾ. ಎಸ್. ಆರ್. ರಂಗನಾಥ್ ಅವರ ಸ್ಮರಣಾರ್ಥ ರಾಷ್ಟ್ರೀಯ ಗ್ರಂಥ ಪಾಲಕರ ದಿನವನ್ನು ಆಚರಿಸಲಾಯಿತು.**



ಟ್ರಸ್ಟಿನ ಅಧ್ಯಕ್ಷ ಎಸ್. ರಾಮಪ್ಪ ಮಾತನಾಡಿ, ಗ್ರಂಥಾಲಯದಲ್ಲಿನ ಪುಸ್ತಕಗಳು ನಮ್ಮ ಜ್ಞಾನ ಭಂಡಾರವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪೂರಕವಾಗಿದ್ದು ಅಲ್ಲದೆ ಗ್ರಂಥಾಲಯಗಳ ಅಭಿವೃದ್ಧಿಗೆ ಎಸ್ ಆರ್ ರಂಗನಾಥ್ ತಮ್ಮದೇ ಆದ ಕೊಡುಗೆ ನೀಡಿದ ಮಹಾನ್ ಚೇತನ ಎಂದರು. ಟ್ರಸ್ಟಿನ ಪದಾಧಿಕಾರಿಗಳು ವಿದ್ಯಾರ್ಥಿಗಳಾದ ಪ್ರವೀಣ್ ದಿಗಂತಗೌಡ ರಾಹುಲ್ ರಾಜ ಸಾಬ್ ವಿದ್ಯಾರ್ಥಿಯರಾದ ವೈಷ್ಣವಿ ಗಾಯಿತ್ರಿ ದೀಕ್ಷಾ ಮಾನಸ ಸೇರಿದಂತೆ ಇತರರು ಇದ್ದರು.

## ಆನೆಹೊಸೂರು ಗ್ರಾಮ ಅಂಜುಮನ್ ಕಮಿಟಿಗೆ ನೂತನ ಪದಾಧಿಕಾರಿಗಳ ಆಯ್ಕೆ

**ನೈಜ್ಯ ದೆಸೆ ನ್ಯೂಸ್**

**ಆನೆಹೊಸೂರು: ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿ (ರಿ.) ವತಿಯಿಂದ ಆನೆಹೊಸೂರು ಗ್ರಾಮದ ಜಾಮಿಯಾ ಮಸೀದಿಯಲ್ಲಿ ದಿನಾಂಕ 10/08/2026 ರಂದು ನಡೆದ ಸಭೆಯಲ್ಲಿ, ಗ್ರಾಮದ ಸಮುದಾಯದವರ ಒಮ್ಮತದ ಅಭಿಪ್ರಾಯದ ಮೇರೆಗೆ ಅಂಜುಮನ್-ಎ-ಮುಸ್ಲಿಮೀನ್ ಆನೆಹೊಸೂರು ಗ್ರಾಮ ಕಮಿಟಿಯನ್ನು ನೂತನವಾಗಿ ಆಯ್ಕೆ ಮಾಡಲಾಯಿತು.**

ನೂತನ ಕಮಿಟಿಯ ಗೌರವ ಅಧ್ಯಕ್ಷರಾಗಿ ದಾವಲ್ ಸಾಬ್ ಪಟಾನ್, ಅಧ್ಯಕ್ಷರಾಗಿ ರಬ್ಬಾನಿ ಸಾಬ್ ಜಾಗೀರದಾರ್, ಉಪಾಧ್ಯಕ್ಷರಾಗಿ ಖಾದರ್ ಸಾಬ್ ಬಾವಿನಮನಿ ಹಾಗೂ ಯಾಸಿನ್ ಆರ್. ಕರಡಿ, ಪ್ರಧಾನ ಕಾರ್ಯದರ್ಶಿಯಾಗಿ ಶಹಾಜನ್ ಆರ್. ಬೆಂಡೋಣಿ, ಜಂಟಿ ಕಾರ್ಯದರ್ಶಿಯಾಗಿ ಹುಸೇನ್ ಸಾಬ್ ಡೋಣಗತ್ತಲ, ಕಾರ್ಯಾಧ್ಯಕ್ಷರಾಗಿ ಮಹೆಬೂಬ್ ಸರಕಾರಿ, ಖಜಾಂಚಿಯಾಗಿ ಬುಡ್ಡಾಸಾಬ್ ಹುಡೇದ್ ಹಾಗೂ ಇನ್ನೋರ್ವ ಖಜಾಂಚಿಯಾಗಿ ಹಸನ್ ಸಾಬ್



ಕೋಳೂರು ಅವರನ್ನು ಆಯ್ಕೆ ಮಾಡಲಾಯಿತು.

ಸದಸ್ಯರಾಗಿ ಶಬ್ಬೀರ್ ಗಿರಣಿ, ರಸೂಲ್ ಹವಾಲ್ದಾರ್, ಹಸನ್ ಸಾಬ್ ನಾಲತವಾಡ, ಶರೀಫ್ ಡೋಣಗತ್ತಲ, ನಜೀರ್ ಮಾಲಾದರ್, ಸುಭಾನ್ ಸಾಬ್, ದಸ್ತಗೀರಸಾಬ್ ಬಳಗಾನೂರು, ಮೈಬುಬ್ ಸಾಬ್ ಚಾಮಲಾಪುರ್, ರಿಯಾಜ್ ಖಾಜಿ, ರಫಿ ತೋಟದ್, ಅಮೀರ್ ಭಗವಾನ್, ಹಸನ್ ಖುರೇಶಿ, ರಜ್ಜಬಅಲಿ ಸರಕಾರಿ, ಚಾಂದಪಾಷಾ ಹೋಟೆಲ್, ಮೋದಿನಸಾಬ್ ಕಿರಾಣಿ ಅಂಗಡಿ, ರಸೂಲ್ ಹುಡೇದ್, ಜಾವೀದ್ ಸರಕಾರಿ, ಯೂಸುಫ್ ಉಸ್ತಾದ್, ಜಾಫರ್ ಟೈಲರ್, ಅಶ್ರಫ್ ಕಿಲೇದಾರ್, ಮಹೆಬುಬ್ ಬೆಂಡೋಣಿ, ಚಾಂದ್ ಪಾಷಾ ಕಂಬಾರ, ರುಕುಮುದ್ದಿನ್ ಹೈದರಾಬಾದ್, ರಾಜಸಾಬ್ ಸರಕಾರಿ, ಹುಸೇನ್ ಸಾಬ್ ಹುಡೇದ್, ಬಡೆಸಾಬ್ ಹುಡೇದ್, ಮೋದಿನ್ ಸಾಬ್ ಅಗಸಿಮನಿ, ಮೈನುದ್ದಿನ್ ಭಗವಾನ್, ಅಲಿ ಚಿತ್ತಾಪುರ, ಅಬ್ದುಲ್ ಸಾಬಣ್ಣನವರ, ರಸೂಲ್ ಹೈದರಾಬಾದ್, ಲಾಳೆಮಶಾಕ್ ನಾಲತವಾಡ ಹಾಗೂ ಅಮೀನ್ ಸಾಬ್ ಕರಡಿ ಅವರನ್ನು ಆಯ್ಕೆ ಮಾಡಲಾಯಿತು.

ಅದೇ ರೀತಿ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಾರ್ಯಕಾರಿ ಸಮಿತಿ ಸದಸ್ಯರಾಗಿ ಖಾಸಿಂಸಾಬ್ ಹುಡೇದ್, ರಾಜಸಾಬ್ ಕರಡಿ, ಮಹಮ್ಮದ್ ರಸೂಲ್ ಸರಕಾರಿ, ಆದಿಲ್ ಸಾಬ್ ಜಾಗೀರದಾರ್, ಬಂದೇನವಾಜ್ ಕೋಳೂರು, ಮೈಬುಸಾಬ್ ನಾಲತವಾಡ, ನಬಿಸಾಬ್ ಗುರಿಕಾರ, ಹುಸೇನ್ ಸಾಬ್ ಕರ್ನಾಚಿ, ನಜೀರ್ ಸಾಬ್ ಟೈಲರ್ ಹಾಗೂ ಷಹಜಹಾನ್ ಬೆಂಡೋಣಿ ಅವರನ್ನು ಆಯ್ಕೆ ಮಾಡಲಾಯಿತು.

ನೂತನವಾಗಿ ಆಯ್ಕೆಯಾದ ಕಮಿಟಿಯು ಗ್ರಾಮದ ಮುಸ್ಲಿಂ ಸಮುದಾಯದ ಶೈಕ್ಷಣಿಕ, ಸಾಮಾಜಿಕ ಹಾಗೂ ಧಾರ್ಮಿಕ ಅಭಿವೃದ್ಧಿಗೆ ಶ್ರಮಿಸುವುದರ ಜೊತೆಗೆ, ಸಮುದಾಯದಲ್ಲಿ ಸೌಹಾರ್ದತೆ ಮತ್ತು ಒಗ್ಗಟ್ಟನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು ಎಂದು ಸಭೆಯಲ್ಲಿ ಆಶಯ ವ್ಯಕ್ತಪಡಿಸಲಾಯಿತು.

ನೂತನ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಅಂಜುಮನ್-ಎ-ಮುಸ್ಲಿಮೀನ್ ಲಿಂಗಸೂಗೂರ ತಾಲೂಕು ಕಮಿಟಿ ವತಿಯಿಂದ ಅಭಿನಂದನೆ ಸಲ್ಲಿಸಲಾಯಿತು.

## ಜಾಲಹಳ್ಳಿ ಅಂಬೇಡ್ಕರ್ ವೃತ್ತದಲ್ಲಿ ತಾತ್ಕಾಲಿಕ ಬಸ್ ಶೆಡ್ ನಿರ್ಮಾಣಕ್ಕೆ ಆಗ್ರಹ

**ನೈಜ್ಯ ದೆಸೆ ನ್ಯೂಸ್**

**ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದ ಅಂಬೇಡ್ಕರ್ ವೃತ್ತದಿಂದ ರಂಗನಾಥಸ್ವಾಮಿ ದೇವಾಲಯದವರೆಗೆ ನಡೆಯುತ್ತಿರುವ ಸಿಸಿ ರಸ್ತೆ ಕಾಮಗಾರಿ ವಿಳಂಬವಾಗುತ್ತಿರುವುದರಿಂದ ಸಾರ್ವಜನಿಕರು, ಮಹಿಳೆಯರು, ಗರ್ಭಿಣಿಯರು, ವೃದ್ಧರು ಹಾಗೂ ಅಂಗವಿಕಲರು ತೀವ್ರತೊಂದರೆ ಅನುಭವಿಸುವಂತಾಗಿದೆ.**

ಸಿಸಿ ರಸ್ತೆ ಕಾಮಗಾರಿ ಹಿನ್ನೆಲೆಯಲ್ಲಿ ಬಸ್ ನಿಲ್ದಾಣದ ರಸ್ತೆ ಬಂದ್ ಆಗಿದ್ದು, ಬಸ್‌ಗಳು ನಿಲ್ದಾಣದೊಳಗೆ ತೆರಳದೆ ಅಂಬೇಡ್ಕರ್ ವೃತ್ತದಲ್ಲೇ ಪ್ರಯಾಣಿಕರನ್ನು ಇಳಿಸಿ ತೆರಳುತ್ತಿವೆ. ಆದರೆ ವೃತ್ತದಲ್ಲಿ ಪ್ರಯಾಣಿಕರು ಕುಳಿತುಕೊಳ್ಳಲು ಅಥವಾ ಮಳೆ?ಬಿಸಿಲಿನಿಂದ ರಕ್ಷಣೆ ಪಡೆಯಲು ಯಾವುದೇ ವ್ಯವಸ್ಥೆ ಇಲ್ಲ. ರಾಜ್ಯ ಹೆದ್ದಾರಿಯಾಗಿರುವುದರಿಂದ ವಾಹನ ಸಂಚಾರವೂ ಹೆಚ್ಚಿದ್ದು, ಬಸ್‌ಗಾಗಿ ಕಾಯುವ ಪ್ರಯಾಣಿಕರು ಆತಂಕದಲ್ಲೇ ರಸ್ತೆ ಬದಿಯಲ್ಲಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ.

ಕಾಮಗಾರಿಯ ಒಂದು ಭಾಗದಲ್ಲಿ ಸಿಸಿ ರಸ್ತೆ ನಿರ್ಮಿಸಲಾಗಿದ್ದು, ಮತ್ತೊಂದು ಭಾಗದ ಕಾಮಗಾರಿ ಪೂರ್ಣಗೊಳ್ಳದೆ ವಿಳಂಬವಾಗುತ್ತಿದೆ



**ಅಧಿಕಾರಿಗಳೊಂದಿಗೆ ಚರ್ಚಿಸಿ ಪರಿಹಾರ**

"ಸಿಸಿ ರಸ್ತೆ ಕಾಮಗಾರಿ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಹಾಗೂ ಕೆಎಸ್‌ಆರ್‌ಟಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿ, ಆದಷ್ಟು ಬೇಗ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದು."

ಶ್ರೀಮತಿ ಲಕ್ಷ್ಮಿ, ವಿಡಿಯೋ ಜಾಲಹಳ್ಳಿ

ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಕೆಕೆಆರ್‌ಡಿಬಿ ಅನುದಾನದಡಿ ನಡೆಯುತ್ತಿರುವ ಕಾಮಗಾರಿಗೆ ಸಂಬಂಧಿಸಿದ ಕೆಆರ್‌ಐಡಿಎಲ್ ಅಧಿಕಾರಿಗಳು ತಕ್ಷಣ ಸ್ಪಂದಿಸಿ ಉಳಿದ ಕಾಮಗಾರಿಯನ್ನು ಶೀಘ್ರ

**ಸಮಸ್ಯೆಗೆ ತಕ್ಷಣ ಪರಿಹಾರ ಸಿಗಲಿ**

"ಕಾಮಗಾರಿ ವಿಳಂಬದಿಂದ ಮಹಿಳೆಯರು, ವೃದ್ಧರು ಹಾಗೂ ಅಂಗವಿಕಲರಿಗೆ ಪ್ರತಿನಿತ್ಯ ತೊಂದರೆಯಾಗುತ್ತಿದೆ. ತಕ್ಷಣವೇ ಅಂಬೇಡ್ಕರ್ ವೃತ್ತದಲ್ಲಿ ತಾತ್ಕಾಲಿಕ ಶೆಡ್ ನಿರ್ಮಿಸಿ ರಸ್ತೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕು. ವಿಳಂಬ ತೋರಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು."

ಹನುಮಂತರಾಯ ನಾಯಕ್ ದೊರೆ, ಪ್ರಗತಿಪರ ಚಿಂತಕರು, ಜಾಲಹಳ್ಳಿ



**ಅನಾಹುತ ಸಂಭವಿಸಿದರೆ ಅಧಿಕಾರಿಗಳೇ ಹೊಣೆ**

"ಸಿಸಿ ರಸ್ತೆ ಕಾಮಗಾರಿಯಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ. ಸರಿಯಾಗಿ ಕ್ಯೂರಿಂಗ್ ಮಾಡದೆ ಕಾಮಗಾರಿಯನ್ನು ಅರ್ಧಕ್ಕೆ ಬಿಟ್ಟು ಹೋಗಲಾಗಿದೆ. ಬಸ್‌ಗಳು ನಿಲ್ದಾಣಕ್ಕೆ ಹೋಗದೆ ಅಂಬೇಡ್ಕರ್ ವೃತ್ತದಲ್ಲೇ ನಿಲ್ಲುತ್ತಿರುವುದರಿಂದ ಅಪಘಾತದ ಭೀತಿ ಇದೆ. ಯಾವುದೇ ಅನಾಹುತ ಸಂಭವಿಸಿದರೆ ಕೆಕೆಆರ್‌ಡಿಬಿ ಅನುದಾನದಡಿ ಕಾಮಗಾರಿ ನಿರ್ವಹಿಸುತ್ತಿರುವ ಕೆಆರ್‌ಐಡಿಎಲ್ ಅಧಿಕಾರಿಗಳು ಹಾಗೂ ಗುತ್ತಿಗೆದಾರರೇ ಹೊಣೆ."

ಭೀಮಣ್ಣ ಗುಮದಾರ್, ಪ್ರಗತಿಪರ ಚಿಂತಕರ

ಪೂರ್ಣಗೊಳಿಸಬೇಕು. ಅಲ್ಲಿಯವರೆಗೆ ಪ್ರಯಾಣಿಕರ ಅನುಕೂಲಕ್ಕಾಗಿ ಅಂಬೇಡ್ಕರ್ ವೃತ್ತದಲ್ಲಿ ಸಿಮೆಂಟ್ ಶೀಟ್‌ಗಳಿಂದ ತಾತ್ಕಾಲಿಕ ಬಸ್ ಶೆಡ್ ನಿರ್ಮಿಸಬೇಕು ಎಂದು ಜಾಲಹಳ್ಳಿಯ ಪ್ರಗತಿಪರ ಚಿಂತಕರು ಹಾಗೂ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಊರಿನ ಪ್ರಮುಖರಾದ ಭೀಮಣ್ಣ ಗುಮದಾರ್ ಹಾಗೂ ಮುಖಂಡರಾದ ರಂಗಣ್ಣ ಕೋಲ್ಕಾರ್, ರಾಮನಗೌಡ ಮಾಲಿಪಾಟೀಲ್, ರಾಜ ಮೊಹಮ್ಮದ್ ಕಾಲಗಾರ, ಹೈದರ್ಸಾಬ್ ಮುಲ್ಲಾ, ಫಯಾಜ್ ಅಹಮದ್ ಬಳಿಗಾರ ಸೇರಿದಂತೆ ಸಾರ್ವಜನಿಕರು ಉಪಸ್ಥಿತರಿದ್ದರು.

**ತಾತ್ಕಾಲಿಕ ಶೆಡ್ ನಿರ್ಮಾಣವಾಗಲಿ**

"ಕೆಆರ್‌ಐಡಿಎಲ್ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಾರ್ವಜನಿಕರು, ಮಹಿಳೆಯರು ಹಾಗೂ ಗರ್ಭಿಣಿಯರು ರಸ್ತೆಯಲ್ಲಿ ಪರದಾಡುವಂತಾಗಿದೆ. ಕೂಡಲೇ ಅಂಬೇಡ್ಕರ್ ವೃತ್ತದಲ್ಲಿ ತಾತ್ಕಾಲಿಕ ಬಸ್ ಶೆಡ್ ನಿರ್ಮಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು."

ರಾಮನಗೌಡ ಮಾಲಿಪಾಟೀಲ್, ಸ್ಥಳೀಯ ಮುಖಂಡರು, ಜಾಲಹಳ್ಳಿ

ಅಧಿಕಾರಿಗಳ ಸ್ಪಷ್ಟನೆ "ರಸ್ತೆ ಕಾಮಗಾರಿ ಮುಗಿದು 15 ದಿನಗಳಾಗಿದ್ದು, ಪ್ರಸ್ತುತ ಕ್ಯೂರಿಂಗ್ ಕಾರ್ಯ ನಡೆಯುತ್ತಿದೆ. ಶೀಘ್ರದಲ್ಲೇ ಉಳಿದ ಕಾಮಗಾರಿಯನ್ನು ಪ್ರಾರಂಭಿಸಿ ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು."

ಶಿವಕುಮಾರ್ ರೆಡ್ಡಿ, ಇಂಜಿನಿಯರ್, ಕೆಆರ್‌ಐಡಿಎಲ್

## ಶಿಕ್ಷಣ ಮಾರ್ಗದರ್ಶಿ ವಿಶೇಷ

### CMA

CMA (Cost and Management Accountant) ಭಾರತದಲ್ಲಿ ವೆಚ್ಚ ಲೆಕ್ಕಪತ್ರ, ಹಣಕಾಸು ನಿರ್ವಹಣೆ ಮತ್ತು ವ್ಯವಹಾರ ನಿರ್ಧಾರಗಳ ಕ್ಷೇತ್ರದಲ್ಲಿ ಉತ್ತಮ ವೃತ್ತಿ ಅವಕಾಶ ನೀಡುವ ವೃತ್ತಿಪರ ಕೋರ್ಸ್. ಭಾರತದಲ್ಲಿ ಇದನ್ನು Institute of Cost Accountants of India (ICMAI) ನಡೆಸುತ್ತದೆ.

ಅಒಂ ಕೋರ್ಸ್‌ನ ಪ್ರಮುಖ ಹಂತಗಳು

Foundation

10+2 / PUC ಉತ್ತೀರ್ಣರಾದವರು ಪ್ರವೇಶ ಪಡೆಯಬಹುದು.

Accounting, Economics, Business Laws ಮುಂತಾದ ಮೂಲಭೂತ ವಿಷಯಗಳನ್ನು ಕಲಿಯುತ್ತಾರೆ.

Intermediate

Foundation ಉತ್ತೀರ್ಣರಾದವರು ಅಥವಾ ಮಾನ್ಯತೆ ಪಡೆದ ಪದವಿ ಹೊಂದಿರುವವರು ಪ್ರವೇಶ ಪಡೆಯಬಹುದು.

Cost Accounting, Financial Accounting, Direct & Indirect Taxation, Operations Management ಮುಂತಾದ ವಿಷಯಗಳು ಇರುತ್ತವೆ.

Final

Intermediate ಹಂತದ ಅಗತ್ಯ ಪರೀಕ್ಷೆಗಳನ್ನು ಪೂರ್ಣಗೊಳಿಸಿದ ನಂತರ ಈಟಿಚಿಟ ಹಂತಕ್ಕೆ ಹೋಗಬಹುದು.

Strategic Financial Management, Cost & Management Audit, Corporate Financial Reporting ಮುಂತಾದ ಉನ್ನತ ವಿಷಯಗಳನ್ನು ಅಧ್ಯಯನ ಮಾಡುತ್ತಾರೆ.

Practical Training

ಅಧ್ಯಯನದ ಜೊತೆಗೆ ಪ್ರಾಯೋಗಿಕ ತರಬೇತಿ ಪಡೆಯುವುದು ವೃತ್ತಿಪರ ಕೌಶಲ್ಯ ಅಭಿವೃದ್ಧಿಗೆ ಮುಖ್ಯವಾಗಿದೆ.

CMA ನಂತರ ಉದ್ಯೋಗಾವಕಾಶಗಳು

CMA ಪೂರ್ಣಗೊಳಿಸಿದವರು ಕೆಳಗಿನ ಕ್ಷೇತ್ರಗಳಲ್ಲಿ ಕೆಲಸ ಮಾಡಬಹುದು:

Cost Accountant
Management Accountant
Financial Analyst
Cost & Management Consultant
Financial Manager
Internal Auditor
Budget Analyst
Corporate Finance
Taxation
Risk Management
Cost Audit

ಉದ್ಯೋಗ ಕ್ಷೇತ್ರಗಳು: ಉತ್ಪಾದನಾ ಕಂಪನಿಗಳು, ಬ್ಯಾಂಕಿಂಗ್ ಮತ್ತು ಹಣಕಾಸು ಸಂಸ್ಥೆಗಳು, ಖಖಿ ಕಂಪನಿಗಳು, ಸರ್ಕಾರಿ ಸಂಸ್ಥೆಗಳು, ಸಾರ್ವಜನಿಕ ವಲಯದ ಕಂಪನಿಗಳು ಮತ್ತು ಕನ್ಸಲ್ಟಿಂಗ್ ಸಂಸ್ಥೆಗಳು.

ವೇತನ

CMA ನಂತರದ ವೇತನವು ಅನುಭವ, ಹುದ್ದೆ, ಕಂಪನಿ, ನಗರ ಮತ್ತು ಕೌಶಲ್ಯಗಳ ಮೇಲೆ ಅವಲಂಬಿತವಾಗಿರುತ್ತದೆ. ಆರಂಭಿಕ ಹಂತದಿಂದಲೇ ಉತ್ತಮ ಅವಕಾಶಗಳಿದ್ದು, ಅನುಭವ ಹೆಚ್ಚಾದಂತೆ ವೇತನ ಮತ್ತು ಹುದ್ದೆಯ ಮಟ್ಟವೂ ಹೆಚ್ಚಾಗಬಹುದು.

ಅಒಂ ಯಾರಿಗೆ ಸೂಕ್ತ?

ಲೆಕ್ಕಪತ್ರ, ಗಣಿತ, ಹಣಕಾಸು, ವ್ಯವಹಾರ ವಿಶ್ಲೇಷಣೆ ಮತ್ತು ನಿರ್ವಹಣಾ ಕ್ಷೇತ್ರಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ CMA ಉತ್ತಮ ಆಯ್ಕೆಯಾಗಬಹುದು.

CMA ? Accounting + Cost Management + Finance + Business Strategy ಎಂಬ ನಾಲ್ಕು ಪ್ರಮುಖ ಕ್ಷೇತ್ರಗಳಲ್ಲಿ ವೃತ್ತಿ ಬೆಳವಣಿಗೆಗೆ ಸಹಾಯ ಮಾಡುತ್ತದೆ.

## 80ನೇ ಸ್ವಾತಂತ್ರ್ಯೋತ್ಸವ : ಲೋಕಭವನ ವೀಕ್ಷಣೆಗೆ ಸಾರ್ವಜನಿಕರಿಗೆ ಅವಕಾಶ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: 80ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಸಾರ್ವಜನಿಕರಿಗೆ ಲೋಕಭವನ-ಕರ್ನಾಟಕ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಆ.16, 17 ಮತ್ತು 18ರಂದು ಸಂಜೆ 5.30ರಿಂದ 7.30ರವರೆಗೆ ದೀಪಾಲಂಕಾರಗೊಂಡಿರುವ ಲೋಕಭವನವನ್ನು ಸಾರ್ವಜನಿಕರು ವೀಕ್ಷಿಸಬಹುದಾಗಿದೆ.




ಭೇಟಿಯನ್ನು ಸುರಕ್ಷಿತ ಹಾಗೂ ಸುಗಮವಾಗಿ ನಡೆಸಲು ಸಾರ್ವಜನಿಕರು ಭದ್ರತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ. ಲೋಕಭವನ ಪ್ರವೇಶಿಸುವ ಪ್ರತಿಯೊಬ್ಬರೂ ಆಧಾರ್ ಕಾರ್ಡ್ ಅಥವಾ ಸರ್ಕಾರದಿಂದ ನೀಡಲಾದ ಯಾವುದೇ ಗುರುತಿನ ಚೀಟಿಯನ್ನು ಭದ್ರತಾ ಸಿಬ್ಬಂದಿಗೆ ಪರಿಶೀಲನೆಗಾಗಿ ತೋರಿಸಬೇಕು. ಎಲ್ಲರೂ ಕಡ್ಡಾಯ ಭದ್ರತಾ ತಪಾಸಣೆಗೆ ಒಳಪಡಬೇಕು. ಸಂದರ್ಶಕರು ನಿಗದಿತ ಮಾರ್ಗ ಹಾಗೂ ಸ್ಥಳಗಳಲ್ಲಿ ಮಾತ್ರ ಸಂಚರಿಸಬೇಕು ಮತ್ತು ಆವರಣದಲ್ಲಿ ಶಾಂತಿ, ಶಿಸ್ತು ಹಾಗೂ ಸಭ್ಯತೆ ಕಾಪಾಡಬೇಕು. ಖಾಸಗಿ ಹಾಗೂ ಟ್ಯಾಕ್ಸಿವಾಹನಗಳಿಗೆ ಲೋಕಭವನದ ಆವರಣದೊಳಗೆ ಪ್ರವೇಶ ಇರುವುದಿಲ್ಲ. ಬ್ಯಾಗ್, ಬ್ಯಾಕ್‌ಪ್ಯಾಕ್, ಆಹಾರ ಪದಾರ್ಥಗಳು, ಪಾನ್, ಗುಟ್ಕಾ, ತಂಬಾಕು, ಸಿಗರೇಟ್, ಮದ್ಯ, ವೃತ್ತಿಪರ ಕ್ಯಾಮೆರಾ, ಲ್ಯಾಪ್‌ಟಾಪ್, ವಿದ್ಯುನ್ಮಾನ ಉಪಕರಣಗಳು, ಚೂಪಾದ ಅಥವಾ ಲೋಹದ ವಸ್ತುಗಳು, ಬೆಂಕಿಪೊಟ್ಟಣ, ಲೈಟರ್, ದಹನಶೀಲ ವಸ್ತುಗಳು, ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ಲೋಕಭವನದೊಳಗೆ ತರುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ನಿಲೋಗಲ್ ಗ್ರಾಮದ ದಲಿತ ಕಾಲೋನಿಗೆ ಮೂಲಭೂತ ಸೌಕರ್ಯ ಕಲ್ಪಿಸುವಂತೆ ದ ಸಂ ಸ ಆಗ್ರಹ

ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು: ನಿಲೋಗಲ್ ಗ್ರಾಮದ ದಲಿತ ಕಾಲೋನಿಯಲ್ಲಿ ಸಾರ್ವಜನಿಕರು ಎದುರಿಸುತ್ತಿರುವ ಮೂಲಭೂತ ಸೌಕರ್ಯಗಳ ಗಂಭೀರ ಸಮಸ್ಯೆಗಳನ್ನು ದಲಿತ ಸಮುದಾಯದ ದೈನಂದಿನ ಬದುಕಿನ ಮೇಲೆ ಗಂಭೀರ ಪರಿಣಾಮ ಬೀರುತ್ತಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಬಗೆಹರಿಸಬೇಕೆಂದು ದಲಿತ ಸಂರಕ್ಷ ಸಮಿತಿಯ ತಾಲೂಕ ಅಧ್ಯಕ್ಷ ಕಿರಣ ಕುಮಾರಚಿಕ್ಕಹೆಸರೂರುಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದರು . ಕುಡಿಯುವ ನೀರಿನ ತೀವ್ರ ಸಮಸ್ಯೆ ದಲಿತ ಕಾಲೋನಿಯಲ್ಲಿ ಮನೆ ಮನೆಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಜನರು ನೀರಿಗಾಗಿ ಊರಿನಿಂದ ಅರ್ಧ ಕಿಲೋಮೀಟರ್ ದೂರ ಹೋಗಬೇಕಾದ ಅನಿವಾರ್ಯತೆ ಇದೆ. ಅದು ತಗ್ಗು ಪ್ರದೇಶದಲ್ಲಿ ಇದ್ದು ದಲಿತರ ಕಾಲೋನಿಗೆ ಪೈಪ್ ಲೈನ್ ಮಾಡಿದರೆ ನೀರು ಎತ್ತರ ಪ್ರದೇಶ ಇರುವುದರಿಂದ ನೀರು ಮೇಲೆ ಇರುವುದಿಲ್ಲ ಅದೇ ಗ್ರಾಮದಲ್ಲಿ ಮೇಲ್ವರ್ಗದವರಿಗೆ ಪ್ರತ್ಯೇಕವಾಗಿ ಎರಡು ಬೋರ್‌ವೆಲ್ ವ್ಯವಸ್ಥೆ ಇದ್ದು, ಮೇಲ್ವರ್ಗದ ಕುಟುಂಬದವರಿಗೆ ಆ ಎರಡು ಬೋರಿನಿಂದ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಉಪಯೋಗಕ್ಕೆ ಬಳಸುತ್ತಾರೆ. ದಲಿತರಿಗೆ ಪೈಪ್‌ಲೈನ್ ಸಂಪರ್ಕ ಕಲ್ಪಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು, ಕಲುಷಿತ ಬಾವಿ ನೀರು ಗ್ರಾಮದ ಹಳೆಯ ಬಾವಿಯ ನೀರನ್ನು ದಲಿತ ಕುಟುಂಬದವರು ಸ್ನಾನ ಮತ್ತು ದಿನ ನಿತ್ಯದ ಬಳಕೆಗೆ ಬಳಸುತ್ತಿದ್ದಾರೆ. ಆದರೆ, ನೀರು ಅತ್ಯಂತ ಕಲುಷಿತವಾಗಿದ್ದು, ಇದನ್ನು ಬಳಸುವ ದಲಿತರಿಗೆ ಚರ್ಮರೋಗ, ಕಜ್ಜಿ ಮತ್ತು ಮೈ ತುರಿಕೆಯಂತಹ ಗಂಭೀರ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿವೆ. ಹಾಗಾಗಿ ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಡಬೇಕು. ಗ್ರಾಮದಲ್ಲಿ ದಲಿತರಿಗೆ ಅಗತ್ಯವಾದ ಸುಸಜ್ಜಿತ ಶೌಚಾಲಯ ವ್ಯವಸ್ಥೆ ಇಲ್ಲದೆ ಮಹಿಳೆಯರು ಮತ್ತು ಮಕ್ಕಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಹಾಗಾಗಿ ಮಹಿಳೆಯರಿಗೆ ಹೈಟೆಕ್ ಶೌಚಾಲಯ ನಿರ್ಮಿಸಿ ಕೊಡಬೇಕು. ದಲಿತರ ಓಣಿಯಲ್ಲಿನ ಚರಂಡಿಗಳು ಸಂಪೂರ್ಣ ಕಲುಷಿತವಾಗಿದ್ದು, ಕಸ, ಕಡ್ಡಿ ಮತ್ತು ಕಲ್ಲುಗಳಿಂದ ತುಂಬಿಹೋಗಿವೆ. ಇದರಿಂದ ದುರ್ವಾಸನೆ ಬೀರುತ್ತಿದ್ದು, ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯಿದೆ. ಹಾಗಾಗಿ ಪಂಚಾಯಿತಿಯಿಂದ ವಾರಕ್ಕೆ ಎರಡು ಬಾರಿ ಚರಂಡಿಯನ್ನು ಸ್ವಚ್ಛತೆಗೊಳಿಸಬೇಕು , ಜಾನುವಾರುಗಳಿಗಾಗಿ ನಿರ್ಮಿಸಿರುವ ನೀರಿನ ತೊಟ್ಟಿಗಳಲ್ಲಿ ಹಳೆ ಬಟ್ಟೆ, ಕಸ ಮತ್ತು ಕಡ್ಡಿಗಳು ಬಿದ್ದಿದ್ದು, ಚರಂಡಿಯ ಕಲುಷಿತ ನೀರು ತೊಟ್ಟಿಗೆ ಹರಿಯುತ್ತಿದೆ. ಇದು ಮೂಕಪ್ರಾಣಿಗಳಿಗೆ ಕುಡಿಯಲು ಆಯೋಗ್ಯವಾಗಿದ್ದು, ಕೂಡಲೇ ಸ್ವಚ್ಛಗೊಳಿಸಿ ದುರಸ್ತಿಪಡಿಸಬೇಕು. ಇದು ಹೆಸರಿಗೆ ಮಾತ್ರ ಜಾನುವಾರು ತುಟಿಯಾಗಿ ಉಳಿದಿದೆ.

ಅಂಬೇಡ್ಕರ್ ಭವನದ ಸುತ್ತಮುತ್ತಲ ಪ್ರದೇಶದಲ್ಲಿ ಸ್ವಚ್ಛತೆ ಇಲ್ಲದೆ ಕಸದ ರಾಶಿ ಬಿದ್ದಿದೆ. ಜಾಲಿ ಮುಳ್ಳು ಬೆಳೆದು ದಾರಿ ಇಲ್ಲದಂತ ಈ ಭವನದ ಪಾವಿತ್ರ್ಯತೆ ಉಳಿಸಲು ಕೂಡಲೇ ಸ್ವಚ್ಛತಾ ಕಾರ್ಯ ಕೈಗೊಳ್ಳಬೇಕು. ಗ್ರಾಮದಲ್ಲಿ ರಾತ್ರಿ ವೇಳೆ ಕತ್ತಲು ಆವರಿಸಿದ್ದು, ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ಸುರಕ್ಷತೆಗಾಗಿ ಕೂಡಲೇ ಸೋಲಾರ್ ಲೈಟ್ಸ್ ಅಳವಡಿಸಬೇಕು. ಡಾ. ಬಿ ಆರ್ ಅಂಬೇಡ್ಕರ್ ಅವರ ಪುತ್ತಳಿ ಉತ್ತಮವಾಗಿ ನಿರ್ಮಾಣ ಗೊಂಡಿದ್ದು ಆ ಪುತ್ತಳಿಗೆ . ಗ್ರಾಮ ಪಂಚಾಯಿತಿ ಕಡೆಯಿಂದ ಹೈ ಮಾಸ್ ದೀಪಾ ನಿರ್ಮಾಣ ಮಾಡಿಕೊಡಬೇಕು. ಈ ಮೂಲಭೂತ ಸೌಕರ್ಯಗಳಿಗಾಗಿ ನಾವು ಬಹಳ ದಿನಗಳಿಂದ ಹೋರಾಡುತ್ತಿದ್ದರೂ ಅಧಿಕಾರಿಗಳು ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ದಲಿತರು ಮೂಲಭೂತ ಸೌಕರ್ಯ ಕಾಣದೆ ಕಂಗಾಲಾಗಿದ್ದಾರೆ. ಒಂದು ವೇಳೆ ಮುಂಬರುವ ದಿನಗಳಲ್ಲಿ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲು ತಕ್ಷಣ ಕ್ರಮ ಕೈಗೊಳ್ಳದಿದ್ದರೆ, ಅನಿವಾರ್ಯವಾಗಿ ದಲಿತ ಸಂರಕ್ಷ ಸಮಿತಿಯ ವತಿಯಿಂದ ತಮ್ಮ ಕಚೇರಿಯ ಮುಂದೆ ಉಗ್ರವಾದ ಹೋರಾಟವನ್ನು ಹಮ್ಮಿಕೊಳ್ಳಲಾಗುವುದು. ಇದಕ್ಕೆ ತಾವೇ ಸಂಪೂರ್ಣ ಹೊಣೆಗಾರರಾಗಿರುತ್ತೀರಿ ಎಂದು ಆಗ್ರಹಿಸಿದರು . ಈ ಸಂದರ್ಭದಲ್ಲಿ ಹುಲಿಗೆಪ್ಪಕೆಸರಟ್ಟಿತಾಲೂಕಾಗೌರವಾಧ್ಯಕ್ಷರು, ವಿಗ್ನೇಶ್ ಹಿರೇನಗನೂರು ಪತ್ರಿಕಾ ಮಾಧ್ಯಮ ಸಲಹೆಗಾರರು , ಮಲ್ಲಿಕೇಶ ಹಿರೇಹೆಸರೂರು ತಾಲೂಕ ಕಾರ್ಯಾಧ್ಯಕ್ಷರು , ಮೌನೇಶ್ ನಗರ ಘಟಕ ಅಧ್ಯಕ್ಷರು , ಅಮರಣ್ಣ ನಗರ ಘಟಕ ಉಪಾಧ್ಯಕ್ಷರು , ಚಿದಾನಂದ ನಗರ ಘಟಕ ಗೌರವಾಧ್ಯಕ್ಷರು , ಶರಣ ಬಸವ ತಾಲೂಕಾ ಸಹ ಸಂಘಟನಾ ಕಾರ್ಯದರ್ಶಿ , ಪ್ರದೀಪ ಮುತ್ತು ಚಿಕ್ಕಹೆಸರೂರು ತಾಲೂಕು ಉಪಾಧ್ಯಕ್ಷರು , ಚಿನ್ನಪ್ಪ ರಾರಾವಿ ಮುದುಗಲ್ ತಾಲೂಕ ಪ್ರಧಾನ ಕಾರ್ಯದರ್ಶಿ , ದಯಾನಂದ ಹಟ್ಟಿ ತಾಲೂಕ ಸಹ ಕಾರ್ಯದರ್ಶಿ , ಪರಶುರಾಮ ನಿಲೋಗಲ್ ತಾಲೂಕ ಸಹ ಕಾರ್ಯದರ್ಶಿ , ರಾಜು ನಗರ ಘಟಕ ಕಾರ್ಯದರ್ಶಿ ,ಮೌನೇಶ್ ಬಿ ಹಟ್ಟಿ ಪಟ್ಟಣ ಅಧ್ಯಕ್ಷರು , ದೀಪಕ್ ದಿಲೀಪ್ ಚಿಕ್ಕಹೆಸರೂರು ತಾಲೂಕಾ ಸಂಘಟನಾ ಕಾರ್ಯದರ್ಶಿ ಸೇರಿದಂತೆ ಇನ್ನು ಅನೇಕರು ಇದ್ದರು .

# ಕ.ಕ ಭಾಗಕ್ಕೆ ಪ್ರತ್ಯೇಕ ನೆರವಿಲ್ಲ : ಕೇಂದ್ರ

## ರಾಜ್ಯಕ್ಕೆ ಒದಗಿಸಲಾಗುವ ಅನುದಾನವನ್ನೇ ಸಮರ್ಪಕವಾಗಿ ಬಳಸಿಕೊಳ್ಳಲು ಸಲಹೆ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ: ಸಂವಿಧಾನದ ವಿಧಿ 371(ಜೆ)ಯಡಿ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಪ್ರತ್ಯೇಕ ವಾರ್ಷಿಕ ಕೇಂದ್ರ ಆರ್ಥಿಕ ನೆರವು ಒದಗಿಸುವಂತೆ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಪ್ರಸ್ತಾಪಕ್ಕೆ ಕೇಂದ್ರ ಸರ್ಕಾರ ಸ್ಪಷ್ಟನೆ ನೀಡಿದ್ದು, ರಾಜ್ಯಕ್ಕೆ ಬಿಡುಗಡೆಯಾಗುವ ಸಾಮಾನ್ಯ ಕೇಂದ್ರ ಅನುದಾನವನ್ನೇ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಬಳಸಿಕೊಳ್ಳುವಂತೆ ತಿಳಿಸಿದೆ.

ಲೋಕಸಭೆಯಲ್ಲಿ ಬಳ್ಳಾರಿ ಸಂಸದ ಇ. ತುಕಾರಾಮ್ ಅವರು ಕೇಳಿದ ಪ್ರಶ್ನೆಗೆ ಗೃಹ ಸಚಿವಾಲಯದ ರಾಜ್ಯ ಸಚಿವ ನಿತ್ಯಾನಂದ ರೈ ಅವರು ಈ ಕುರಿತು ಲಿಖಿತ ಉತ್ತರವನ್ನು ನೀಡಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದ ಹಿಂದುಳಿದಿರುವಿಕೆಯನ್ನು ನಿವಾರಿಸಲು ಮತ್ತು ವಿಶೇಷ ಅಗತ್ಯಗಳನ್ನು ಪೂರೈಸಲು ಸಂವಿಧಾನದ 371(ಜೆ) ವಿಧಿಯ ವಿಶೇಷ ನಿಬಂಧನೆಗಳಡಿ ಪ್ರತಿವರ್ಷ ಪ್ರತ್ಯೇಕ ಕೇಂದ್ರ ಆರ್ಥಿಕ ನೆರವು ನೀಡಲು ಕರ್ನಾಟಕ ಸರ್ಕಾರ ಪ್ರಸ್ತಾಪ ಸಲ್ಲಿಸಿದೆಯೇ? ಎಂಬ ಪ್ರಸ್ತಾಪದ ಮೇಲೆ ಕೇಂದ್ರ ಸರ್ಕಾರ ಕೈಗೊಂಡ ಕ್ರಮವೇನು? ಹಾಗೂ ಪ್ರತ್ಯೇಕ ಅನುದಾನ ನೀಡಲು ಕಾಲಮಿತಿ ಇದೆಯೇ ಎಂದು ಸಂಸದರು ಪ್ರಶ್ನಿಸಿದ್ದರು.

ಸಂಸದರ ಪ್ರಶ್ನೆಗೆ ಉತ್ತರಿಸಿರುವ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ತೆರಿಗೆ ಮತ್ತು ಸುಂಕಗಳ ಹಂಚಿಕೆ ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯ ಗ್ರಾಂಟ್ಸ್-ಇನ್-ಏಡ್', 'ಹಣಕಾಸು ಆಯೋಗ'ದ ಅನುದಾನ ಹಾಗೂ ಬಂಡವಾಳ ಹೂಡಿಕೆಗಾಗಿ ರಾಜ್ಯಗಳಿಗೆ ನೀಡುವ ವಿಶೇಷ ನೆರವು (ಎಸ್‌ಎಎಸ್‌ಸಿಐ) ಯೋಜನೆಯಡಿ ಕೇಂದ್ರ ಸರ್ಕಾರವು ಕರ್ನಾಟಕಕ್ಕೆ ಈಗಾಗಲೇ ಗಣನೀಯ ಪ್ರಮಾಣದ ಆರ್ಥಿಕ ಸಂಪನ್ಮೂಲವನ್ನು ಒದಗಿಸುತ್ತಿದೆ' ಎಂದು ವಿವರಣೆ ನೀಡಿದ್ದಾರೆ.



ಕೇಂದ್ರದ ಸಚಿವರ ಉತ್ತರ ಸಮಾಧಾನ ತಂದಿಲ್ಲ. ಹೀಗಾಗಿಯೇ ಕಲ್ಯಾಣ ಕರ್ನಾಟಕ ಭಾಗದ ಪ್ರತಿನಿಧಿಗಳು ಸಚಿವರನ್ನು ಭೇಟಿಯಾಗಿ, ರಾಜ್ಯಕ್ಕೆ ಅಗತ್ಯವಿರುವ ಬೇಡಿಕೆ ಪಟ್ಟಿಯನ್ನು ಸಲ್ಲಿಸಿದ್ದೇವೆ. ರಾಜ್ಯದಿಂದ ಸೂಕ್ತ ಪ್ರಸ್ತಾವನೆ ಕಳುಹಿಸಿಕೊಟ್ಟರೆ ಪರಿಶೀಲನೆ ಮಾಡುವುದಾಗಿ ಕೇಂದ್ರ ಸಚಿವರು ಭರವಸೆ ನೀಡಿದ್ದಾರೆ.

ಇ. ತುಕಾರಾಂ ಸಂಸದರು. ಬಳ್ಳಾರಿ.

# ರಜಪೂತ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ಆಗ್ರಹಿಸಿ ಉಪ ತಹಶೀಲ್ದಾರ್‌ಗೆ ಮನವಿ

ನೈಜ್ಯ ದೆಸೆ ನ್ಯೂಸ್



ಕವಿತಾಳ: ರಾಜ್ಯದಾದ್ಯಂತ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಹಿಂದುಳಿದಿರುವ ರಜಪೂತ ಸಮಾಜದ ಸಮಗ್ರ ಅಭಿವೃದ್ಧಿಗಾಗಿ ಪ್ರತ್ಯೇಕ ರಜಪೂತ ಅಭಿವೃದ್ಧಿ ಮಂಡಳಿ ಸ್ಥಾಪಿಸುವಂತೆ ಸರ್ಕಾರಕ್ಕೆ ಶಿಫಾರಸು ಮಾಡಬೇಕೆಂದು ಆಗ್ರಹಿಸಿ, ರಜಪೂತ ಯುವಕ ಮಂಡಳಿ (ರಿ.) ಕವಿತಾಳ ಘಟಕದ ವತಿಯಿಂದ ಉಪ ತಹಶೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಆನಂದ ಸಿಂಗ್ ದಢೇದ ಮಾತನಾಡಿ, ರಜಪೂತ ಸಮಾಜವು ರಾಜ್ಯದಲ್ಲಿ ಗಣನೀಯ ಪ್ರಮಾಣದ ಜನಸಂಖ್ಯೆ ಹೊಂದಿದ್ದರೂ, ಇಂದಿಗೂ ಶೈಕ್ಷಣಿಕ, ಆರ್ಥಿಕ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ನಿರೀಕ್ಷಿತ ಮಟ್ಟದ ಪ್ರಗತಿ ಸಾಧಿಸಲು ಸಾಧ್ಯವಾಗಿಲ್ಲ. ಸಮಾಜದ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮಕ್ಕಳಿಗೆ ಉತ್ತಮ ಶಿಕ್ಷಣ ಪಡೆಯಲು ಅಗತ್ಯವಾದ ಸೌಲಭ್ಯಗಳು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ, ವಿದ್ಯಾರ್ಥಿವೇತನ ಹಾಗೂ ಉದ್ಯೋಗ ಮಾರ್ಗದರ್ಶನದ ಕೊರತೆಯಿದೆ ಎಂದು ಹೇಳಿದರು. ಸಮಾಜದ ಯುವಜನರು ಪ್ರತಿಭೆ ಮತ್ತು ಸಾಮರ್ಥ್ಯ ಹೊಂದಿದ್ದರೂ ಸೂಕ್ತ ಅವಕಾಶಗಳು ಹಾಗೂ ಸರ್ಕಾರದ ಪ್ರೋತ್ಸಾಹದ ಕೊರತೆಯಿಂದಾಗಿ ಅನೇಕರು ತಮ್ಮ ಸಾಮರ್ಥ್ಯವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ರಜಪೂತ ಸಮಾಜದ ವಿದ್ಯಾರ್ಥಿಗಳು ಹಾಗೂ ಯುವಕರಿಗಾಗಿ ವಿಶೇಷ ಶೈಕ್ಷಣಿಕ ಮತ್ತು ಉದ್ಯೋಗಾಧಾರಿತ ಯೋಜನೆಗಳನ್ನು ರೂಪಿಸುವ ಅಗತ್ಯವಿದೆ ಎಂದು ಅವರು ತಿಳಿಸಿದರು.

ರಜಪೂತ ಸಮಾಜದ ಪ್ರಸ್ತುತ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ವೈಜ್ಞಾನಿಕವಾಗಿ ದಾಖಲಿಸುವ ಉದ್ದೇಶದಿಂದ ಕಲಬುರಗಿ ಜಿಲ್ಲಾಡಳಿತದ ಉಸ್ತುವಾರಿಯಲ್ಲಿ ಕೌಟುಂಬಿಕ ಸಮೀಕ್ಷೆ ಹಾಗೂ ಡಿಜಿಟಲ್ ನೋಂದಣಿ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಈ ಪ್ರಕ್ರಿಯೆ ಅತ್ಯಂತ ಯಶಸ್ವಿಯಾಗಿ ಪೂರ್ಣಗೊಂಡಿದೆ. ಸಮೀಕ್ಷೆಯ ಮೂಲಕ ಸಮಾಜದ ಕುಟುಂಬಗಳ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಕುರಿತು ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಸಮಗ್ರದತ್ತಾಂಶಗಳ ವರದಿ ಪ್ರಸ್ತುತ ಬೆಂಗಳೂರಿನಲ್ಲಿರುವ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಆಯೋಗದ ಪರಿಶೀಲನೆಯಲ್ಲಿದ್ದು, ಈ ವರದಿಯನ್ನು ಆಧಾರವಾಗಿಟ್ಟುಕೊಂಡು ರಜಪೂತ ಸಮಾಜದ ನೈಜ ಪರಿಸ್ಥಿತಿಯನ್ನು ಸರ್ಕಾರ ಸಮಗ್ರವಾಗಿ ಪರಿಶೀಲಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ರಜಪೂತ ಸಮಾಜದ ಜನರನ್ನು ಒಂದೇ ವೇದಿಕೆಯಡಿ ಸಂಘಟಿಸುವ ನಿಟ್ಟಿನಲ್ಲಿ ಕೌಟುಂಬಿಕ ಸಮೀಕ್ಷೆ ಹಾಗೂ ಡಿಜಿಟಲ್ ನೋಂದಣಿ ಅಭಿಯಾನ ಮಹತ್ವದ ಹೆಜ್ಜೆಯಾಗಿದೆ. ಈ ಮೂಲಕ ಸಮಾಜದ ಅಗತ್ಯತೆಗಳು ಮತ್ತು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ಪರಿಣಾಮಕಾರಿಯಾಗಿ ತರಲು ಸಾಧ್ಯವಾಗಲಿದೆ ಎಂದು ಪದಾಧಿಕಾರಿಗಳು ಹೇಳಿದರು.

ರಜಪೂತ ಅಭಿವೃದ್ಧಿ ಮಂಡಳಿ ಸ್ಥಾಪನೆಯಾದಲ್ಲಿ, ಸಮಾಜದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ, ಕೌಶಲ್ಯಾಭಿವೃದ್ಧಿ, ಉದ್ಯೋಗ ಮಾರ್ಗದರ್ಶನ, ಸ್ವಯಂ ಉದ್ಯೋಗಕ್ಕೆ ಆರ್ಥಿಕ ನೆರವು, ಮಹಿಳೆಯರ ಸಬಲೀಕರಣ ಹಾಗೂ ಬಡ ಕುಟುಂಬಗಳ ಆರ್ಥಿಕ ಉನ್ನತಿಗೆ ವಿವಿಧ ಯೋಜನೆಗಳನ್ನು ರೂಪಿಸಲು ಅನುಕೂಲವಾಗಲಿದೆ ಎಂದು ಅವರು ಅಭಿಪ್ರಾಯಪಟ್ಟರು. ಹೀಗಾಗಿ ಸರ್ಕಾರವು ರಜಪೂತ ಸಮಾಜದ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟ ಇಲಾಖೆಗಳ ಮೂಲಕ ಅಗತ್ಯ ಪ್ರಕ್ರಿಯೆ ಕೈಗೊಂಡು ಪ್ರತ್ಯೇಕ ರಜಪೂತ ಅಭಿವೃದ್ಧಿ ಮಂಡಳಿಯನ್ನು ಶೀಘ್ರವಾಗಿ ಸ್ಥಾಪಿಸಬೇಕು. ಈ ಮೂಲಕ ಸಮಾಜದ ಬಹುಕಾಲದ ಬೇಡಿಕೆಗೆ ಸ್ಪಂದಿಸಿ, ಅಭಿವೃದ್ಧಿಯ ಅವಕಾಶಗಳಿಂದ ವಂಚಿತರಾಗಿರುವ ಕುಟುಂಬಗಳಿಗೆ ನ್ಯಾಯ ಒದಗಿಸಬೇಕು ಎಂದು ಪದಾಧಿಕಾರಿಗಳು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಸಂಜೀವ ಸಿಂಗ್, ಪ್ರಧಾನ ಕಾರ್ಯದರ್ಶಿ ಕಿಶನ್ ಸಿಂಗ್, ಯಮನಸಿಂಗ್, ಹೀರಾಲಾಲ್ ಸಿಂಗ್, ನಾಗೇಂದ್ರ ಸಿಂಗ್, ಮಹಾದೇವ ಸಿಂಗ್, ವಿಜಯ್ ಸಿಂಗ್, ಟಿಪ್ಪು ಸಿಂಗ್, ತುಳಜಾರಾಮ ಸಿಂಗ್, ಹುಸೇನಪೂರ ವಿನಾಯಕ ಸಿಂಗ್ ಸೇರಿದಂತೆ ರಜಪೂತ ಸಮಾಜದ ಮುಖಂಡರು, ಯುವಕರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಹಟ್ಟಿ ಭಾಗದ ಜನರ ಬೇಡಿಕೆಗೆ ಸಂಸದರ ಸ್ಪಂದನೆ

ನೈಜ್ಯ ದೆಸೆ ನ್ಯೂಸ್



ಹಟ್ಟಿ: ಹಟ್ಟಿ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಜನರ ಬಹುದಿನಗಳ ಪ್ರಮುಖ ಬೇಡಿಕೆಯಾಗಿರುವ ಫೀಡರ್ ರಸ್ತೆ ನಿರ್ಮಾಣಕ್ಕೆ ರಾಯಚೂರು ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರಾದ ಶ್ರೀ ಜಿ. ಕುಮಾರ್ ನಾಯಕ್ ಅವರು ಸ್ಪಂದಿಸಿ, ಕೇಂದ್ರ ಮಟ್ಟದಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಮುಂದಾಗಿರುವುದು ಹಟ್ಟಿ ಭಾಗದ ಜನರಲ್ಲಿ ಸಂತಸ ಮೂಡಿಸಿದೆ.

ಫೀಡರ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಕಾರ್ಯದರ್ಶಿಯವರಿಗೆ ಸಂಸದರು ಅಧಿಕೃತವಾಗಿ ಪತ್ರ ಬರೆದು, ಹಟ್ಟಿ ಭಾಗದ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ರಸ್ತೆ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ. ಇದರ ಜೊತೆಗೆ, ಯೋಜನೆಗೆ ಸಂಬಂಧಿಸಿದಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಅಧಿಕಾರಿಗಳೊಂದಿಗೆ ನಿರಂತರವಾಗಿ ಪತ್ರ ವ್ಯವಹಾರ ನಡೆಸುತ್ತಿದ್ದು, ಫೀಡರ್ ರಸ್ತೆ ನಿರ್ಮಾಣದ ಬೇಡಿಕೆಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವಲ್ಲಿ ಸಂಸದರು ಸತತ ಪ್ರಯತ್ನ ನಡೆಸುತ್ತಿದ್ದಾರೆ.

ಹಟ್ಟಿ ಭಾಗವು ಕೈಗಾರಿಕೆ, ವ್ಯಾಪಾರ ಹಾಗೂ ಸಾರ್ವಜನಿಕ ಸಂಚಾರದ ದೃಷ್ಟಿಯಿಂದ ಪ್ರಮುಖ ಪ್ರದೇಶವಾಗಿದ್ದು, ಉತ್ತಮ ರಸ್ತೆ ಸಂಪರ್ಕವು ಈ ಭಾಗದ ಅಭಿವೃದ್ಧಿಗೆ ಅತ್ಯಂತ ಅಗತ್ಯವಾಗಿದೆ. ಫೀಡರ್ ರಸ್ತೆ ನಿರ್ಮಾಣವಾದರೆ ಹಟ್ಟಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಸುಗಮ ಹಾಗೂ ಸುರಕ್ಷಿತ ಸಂಚಾರಕ್ಕೆ ಅನುಕೂಲವಾಗುವುದರ ಜೊತೆಗೆ, ವ್ಯಾಪಾರ-ವಹಿವಾಟು ಮತ್ತು ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ದೊರೆಯಲಿದೆ. ಜನರ ಸಮಸ್ಯೆಗಳನ್ನು ಕೇವಲ ಆಲಿಸುವುದಷ್ಟೇ ಅಲ್ಲದೆ, ಅವುಗಳನ್ನು ಕೇಂದ್ರ ಸರ್ಕಾರದ ಮಟ್ಟದಲ್ಲಿ ಪ್ರಸ್ತಾಪಿಸಿ ಪರಿಹಾರ ಕಂಡುಕೊಳ್ಳಲು ನಿರಂತರ ಪ್ರಯತ್ನಿಸುತ್ತಿರುವ ಮಾನ್ಯ ಸಂಸದರಾದ ಶ್ರೀ ಜಿ. ಕುಮಾರ್ ನಾಯಕ್ ಅವರ ಕಾರ್ಯಕ್ಕೆ ಹಟ್ಟಿ ಭಾಗದ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಹಟ್ಟಿ ಭಾಗದ ಜನರ ಬಹುದಿನಗಳ ಕನಸಾಗಿರುವ ಫೀಡರ್ ರಸ್ತೆ ನಿರ್ಮಾಣಕ್ಕೆ ಶೀಘ್ರ ಅನುಮೋದನೆ ದೊರೆತು ಕಾಮಗಾರಿ ಆರಂಭವಾಗಲಿ ಎಂಬುದು ಸಾರ್ವಜನಿಕರ ಆಶಯವಾಗಿದೆ. ಹಟ್ಟಿ ಪಟ್ಟಣದ ಸಮಸ್ತ ಸಾರ್ವಜನಿಕರ ಪರವಾಗಿ ಜನಪರ ಕಾಳಜಿಯಿಂದ ಕಾರ್ಯನಿರ್ವಹಿಸುತ್ತಿರುವ ಮಾನ್ಯ ಸಂಸದರಾದ ಶ್ರೀ ಜಿ. ಕುಮಾರ್ ನಾಯಕ್ ಸಾಹೇಬರಿಗೆ ತುಂಬು ಹೃದಯದ ಧನ್ಯವಾದಗಳು ಹಾಗೂ ಅಭಿನಂದನೆಗಳು. ಜನರ ಬೇಡಿಕೆ ಸಂಸದರ ಪ್ರಯತ್ನ ಅಭಿವೃದ್ಧಿಯ ನಿರೀಕ್ಷೆ. ಹಟ್ಟಿ ಭಾಗದ ಅಭಿವೃದ್ಧಿಗೆ ನಮ್ಮೆಲ್ಲರ ಒಗ್ಗಟ್ಟಿನ ಧ್ವನಿ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101